ESTD: 1919 ಸ್ಥಾಪನೆ

Registered No. M. 4468

ಚಂದಾ ದರ

ಸ್ಥಳೀಯರಿಗೆ 4–8–0

ಪರಸ್ಥಳೀಯರಿಗೆ 6–2–0

ಬಿಡಿ ಸಂಚಿಕೆ:

ಮಂಗಳವಾರ 0–1–6

ಶುಕ್ರವಾರ 0–0–6

ಕಾರ್ಯಾಲಯ
ರಥಬೀದಿ, ಮಂಗಳೂರು

ಕಂಠೀರವ

KANNADA KANTEERAVA BI-WEEKLY

ಸಂಪುಟ ೨೮] ಮಂಗಳೂರು, ೧೯೪೬ನೇ ಇಸವಿ ಮೇ ತಾ. ೭ನೇ ಮಂಗಳವಾರ [ಸಂಚಿಕೆ ೧೧

VOL·XXVIII] MANGALORE, TUESDAY 7 MAY, 1946 [NO. 11

Work Executed by Skilled Artists

Oil Paintings
Commercial Drawings
Cinema Slides
Etc. Etc.

Shevgoor Fine Arts
CAR ST. MANGALORE.

ಅಭಿನಂದನೆ.

(ಲೇಖಕ:—ಶ್ರೀ. ಕೆ. ಕೃಷ್ಣರಾವ್, ಬಿ ಎ.)

ಮದ್ರಾಸಿನಲ್ಲಿ ಆಂಧ್ರ ಕೇಸರಿ ಶ್ರೀ. ಟಿ. ಪ್ರಕಾಶಂ ಬಾರ್–ಅಟ್–ಲಾ ಅವರು ಮಂತ್ರಿಮಂಡಲವನ್ನು ರಚಿಸಿದರು. ಈಗಾಗಲೇ ಮಂತ್ರಿಗಳು ತಮ್ಮ ಇಲಾಖೆಗಳ ಆಡಳಿತೆಯ ಕಾರ್ಯಭಾರವನ್ನು ವಹಿಸಿಕೊಂಡಿದ್ದಾರೆ. ಕಾಂಗ್ರೆಸ್ ಮಂತ್ರಿಮಂಡಲವು ಸ್ಥಾಪನೆಯಾದುದರ ಫಲವಾಗಿ ಈಗ ಅಧಿಪತ್ಯದಲ್ಲಿ ಕಳೆದ ಏಳು ವರ್ಷಗಳಲ್ಲಿ ಬಲವಾಗಿ ಬೇರೂರಿದ್ದ ಅಡ್ವೈಜರರ ನಿರಂಕುಶ ಪ್ರಭುತ್ವವು ಕಿತ್ತು ಹಾಕಲ್ಪಟ್ಟಂತಾಯಿತು. ನಿರಂಕುಶ ಅಧಿಕಾರದ ಸ್ಥಾನದಲ್ಲಿ ಸಾಂಕುಶ ಹಾಗೂ ಜನತಾ ಪ್ರತಿನಿಧಿಗಳ ಸರಕಾರವನ್ನು ಪ್ರಾಂತಕ್ಕೆ ಕೊಟ್ಟ ಬಗ್ಗೆ ಮೊದಲಾಗಿ ನಾವು ಶ್ರೀ. ಪ್ರಕಾಶಂ ಅವರನ್ನು ಅಭಿನಂದಿಸಬೇಕು.

ಎರಡನೆಯದಾಗಿ ಶ್ರೀ. ಪ್ರಕಾಶಂ ಅವರು ಬಹಳ ಜತನದಿಂದ ತಮ್ಮ ಮಂತ್ರಿಗಳನ್ನು ಆರಿಸಿದ್ದಾರೆ. ಇದರಲ್ಲಿ ಮದ್ರಾಸ್ ಅಧಿಪತ್ಯಕ್ಕೆ ಸೇರಿದ ಬೇರೆ ಬೇರೆ ಪ್ರಾಂತಗಳ—ಉದಾಹರಣೆಗಾಗಿ ಆಂಧ್ರ, ತಮಿಳು, ಕೇರಳ, ಕರ್ನಾಟಕ—ಪ್ರತಿನಿಧಿಗಳನ್ನು ತಮ್ಮ ಮಂತ್ರಿಮಂಡಲಕ್ಕೆ ಸೇರಿಸಿಕೊಂಡು ಇದನ್ನು ನಿಜವಾದ ಪ್ರತಿನಿಧಿ ಸರಕಾರವನ್ನಾಗಿ ಮಾಡಿದ್ದಾರೆ. ಅಲ್ಲದೆ ಇವರು ಸ್ತ್ರೀಯರ ಮತ್ತು ಅಲ್ಪ ಸಂಖ್ಯಾಕರ ಪ್ರತಿನಿಧಿಗಳನ್ನೂ ಅಲಕ್ಷ್ಯ ಭಾವದಿಂದ ಕಾಣಲಿಲ್ಲ. ಅವರ ಪ್ರತಿನಿಧಿಗಳಿಗೂ ಕೂಡ ಮಂತ್ರಿಮಂಡಲದಲ್ಲಿ ಸ್ಥಾನವನ್ನು ಕೊಟ್ಟಿದ್ದಾರೆ. ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರು ಆರೋಗ್ಯ ಖಾತೆಗೆ ನೇಮಿಸಲ್ಪಟ್ಟಿದ್ದಾರೆ. ನಮ್ಮ ಆಧಿಪತ್ಯದಲ್ಲಿ ಹಿಂದೀ ಕ್ರೈಸ್ತರು ಅಲ್ಪ ಸಂಖ್ಯಾಕರು; ಅವರ ಪ್ರತಿನಿಧಿಗಳಾದ ಶ್ರೀ. ಡಾನಿಯಲ್ ಥಾಮಸರನ್ನು ಮಂತ್ರಿಪದವಿಗೇರಿಸಿ ಅಲ್ಪ ಸಂಖ್ಯಾಕರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಇನ್ನು ಪ್ರಾಂತಗಳ ಪ್ರಾತಿನಿಧ್ಯದ ವಿಷಯವಾಗಿ ಹೇಳುವುದಾದರೆ ಆಂಧ್ರ ತಮಿಳು ನಾಡಿಗಷ್ಟೇ ಅಲ್ಲ; ಮಂತ್ರಿಪದವಿಗಳು. ಶ್ರೀ. ಕೆ. ಆರ್. ಕಾರಂತರನ್ನು ನೇಮಿಸಿ ಕರ್ನಾಟಕರನ್ನೂ ಗೌರವಿಸಿದ್ದಾರೆ. ಕೇರಳದ ಪ್ರತಿನಿಧಿಗಳನ್ನು ಸಹ ಸದ್ಯದಲ್ಲಿಯೇ ಮಂತ್ರಿಮಂಡಲಕ್ಕೆ ಆರಿಸಿಕೊಳ್ಳುವರೆಂಬ ವಿಷಯವನ್ನು ಆಗಲೇ ಪ್ರಕಟಿಸಿದ್ದಾರೆ. ಇನ್ನು ನಮ್ಮ ಆಧಿಪತ್ಯದ ಮುಸ್ಲಿಮರ ಪ್ರತಿನಿಧಿಗಳೊಬ್ಬರಿಗೆ ಮಂತ್ರಿಮಂಡಲದಲ್ಲಿ ಸ್ಥಾನ ದೊರೆತಿದ್ದರೆ ನಿಜವಾದ ರಾಷ್ಟ್ರೀಯ ಸರಕಾರವು ಮದ್ರಾಸಿನಲ್ಲಿ ಸ್ಥಾಪಿಸಲ್ಪಟ್ಟಂತಾಗುತ್ತಿತ್ತೆಂದು ಕೆಲವರು ಹೇಳಬಹುದು. ಇದು ಸಾಧ್ಯವಾಗದೆ ಹೋದುದು ಶ್ರೀ. ಪ್ರಕಾಶಂ ಅವರ ತಪ್ಪಿಂದ ಅಲ್ಲ. ಮದ್ರಾಸ್ ಅಧಿಪತ್ಯದಲ್ಲಿ ರಾಷ್ಟ್ರೀಯ ಭಾವನೆಯಿದ್ದುರಾಷ್ಟ್ರಪಕ್ಷದ ಮಂತ್ರಿಮಂಡಲದಲ್ಲಿ ಸ್ಥಾನ ಪಡೆದು ಅಧಿಕಾರ ನಡೆಸುವಷ್ಟು ಯೋಗ್ಯತೆಯಿದ್ದವರನ್ನು ಆಧಿಪತ್ಯದ ಮುಸ್ಲಿಮರು ಆರಿಸಲಿಲ್ಲ. ಈ ಕಾಂಗ್ರೆಸಿಗೆ ಸರ್ವ ಎಥದಲ್ಲಿಯೂ ವಿರೋಧಿಗಳಾಗಿರುವ ಲೀಗಿನ ಪ್ರತಿನಿಧಿಗಳನ್ನು ಶ್ರೀ ಪ್ರಕಾಶಂ ಅವರು ಆರಿಸದೆ ಹೋದರೆ ಅದಕ್ಕೆ ಅವರನ್ನು ದೂರಿ ಫಲವಿಲ್ಲ. ಈಗ ಸಿಂಧ್ ಮತ್ತು ಬಂಗಾಳಗಳಲ್ಲಿ ಪ್ರಬಲವಾಗಿರುವ ರಾಷ್ಟ್ರಪಕ್ಷಗಳನ್ನು ಹೊರಗಿಟ್ಟು ಮುಸ್ಲಿಂ ಲೀಗಿನವರು ಮಂತ್ರಿಮಂಡಲಗಳನ್ನು ರಚಿಸಲಿಲ್ಲವೇ? ಇದಕ್ಕೆ ರಾಷ್ಟ್ರಪಕ್ಷದವರು ಆಕ್ಷೇಪಿಸಿದ್ದಾರೆಯೇ? ಹಾಗೆಯೇ ನಮ್ಮ ಆಧಿಪತ್ಯದಲ್ಲಿ ಮುಸ್ಲಿಂ ಲೀಗಿನವರಿಗೆ ಸ್ಥಾನವನ್ನು ಕಾಂಗ್ರೆಸಿನವರು ಕೊಡದಿದ್ದರೆ ಅದಕ್ಕಾಗಿ ಲೀಗಿನವರು ಆಕ್ಷೇಪ ಹೇಳುವಂತಿಲ್ಲ. ಅಂತೂ ಯಾವ ದೃಷ್ಟಿಯಿಂದ ನೋಡಿದರೂ ಬ್ಯಾರಿಸ್ಟರ್ ಪ್ರಕಾಶಂ ಅವರ ಮಂತ್ರಿಮಂಡಲವು ಹೊಗಳಲ್ಪಡುವುದಕ್ಕೆ ಯೋಗ್ಯವಾಗಿದೆ. ಮಾತ್ರವಲ್ಲ; ಅನೇಕ ದೃಷ್ಟಿಯಿಂದ ಹಿಂದಿನ ಕಾಂಗ್ರೆಸ್ ಮಂತ್ರಿಮಂಡಲಕ್ಕಿಂತಲೂ ಹೆಚ್ಚಿನ ಮಟ್ಟಿಗೆ ಜನತೆಯ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತದೆಂದರೆ ತಪ್ಪಾಗದು. ಎಲ್ಲ ಪ್ರಾಂತಗಳ ಮತ್ತು ಎಲ್ಲ ಜಾತಿಕೋಮುಗಳ ಪ್ರತಿನಿಧಿಗಳಿಂದ ಕೂಡಿದ ಶ್ರೀ. ಪ್ರಕಾಶಂ ಅವರ ಮಂತ್ರಿಮಂಡಲವು ಹೆಚ್ಚಿನ ಮಟ್ಟಿಗೆ ಜನಪ್ರೀತವಾಗಿದೆಯೆಂದು ಧಾರಾಳವಾಗಿ ಹೇಳಬಹುದು.

ಇನ್ನು ಮಂತ್ರಿಮಂಡಲದವರು ಮುಂದಕ್ಕೆ ಮಾಡಲಿರುವ ಕಾರ್ಯಗಳ ವಿಷಯವಾಗಿ ಈಗ ಹೆಚ್ಚೇನೂ ಹೇಳಲು ಸಾಧ್ಯವಿಲ್ಲ. ಆದರೆ ಇಷ್ಟನ್ನು ಹೇಳಬಹುದು. ಮಂತ್ರಿಮಂಡಲಕ್ಕೆ ಸೇರಿದ ಪ್ರತಿಯೊಬ್ಬರೂ ತಮ್ಮ ಪಾಲಿನ ಕರ್ತವ್ಯವನ್ನು ದಕ್ಷತೆಯಿಂದ ಮಾಡುವರೆಂಬುದರಲ್ಲಿ ಸಂಶಯವಿಲ್ಲ.

ಪ್ರಕೃತ ಮಂತ್ರಿಗಳ ಆಡಳಿತಕ್ಕೆ ಕೊಡಲ್ಪಟ್ಟ ಇಲಾಖೆಗಳ ಕುರಿತು ಸ್ವಲ್ಪ ಟೀಕೆ ಬರಬಹುದು. ಕೆಲವರ ಅಧೀನದಲ್ಲಿ ಹಲವು ಇಲಾಖೆಗಳಿವೆ. ಇನ್ನು ಕೆಲವರ ಕೈಕೆಳಗೆ ಒಂದೊಂದೇ ಇಲಾಖೆಗಳಿವೆ. ಒಬ್ಬರಿಗೆ ಅಧಿಕ ಕೆಲಸ. ಇನ್ನೂ ಕೆಲವರಿಗೆ ಕಡಿಮೆ ಕೆಲಸ. ಹೀಗಿರುವುದು ಸರಿಯಲ್ಲ; ಕೆಲಸವನ್ನು ಸರಿಯಾಗಿ ಹಂಚಿಕೊಡುವುದರಿಂದ ಹೆಚ್ಚಿನ ಪ್ರಯೋಜನವಾದೀತು. ಪ್ರಧಾನರು ಒಂದೇ ಇಲಾಖೆಯನ್ನು ತಮ್ಮ ವಶ ಇಟ್ಟುಕೊಂಡು ಇತರ ಮಂತ್ರಿಗಳು ಮಾಡುವ ಕೆಲಸದ ಮೇಲ್ವಿಚಾರಣೆ ವಹಿಸಿದರೆ ಹೆಚ್ಚಿನ ಪ್ರಯೋಜನವಾದೀತು. ಆದರೆ ಈ ಸಂಗತಿಯನ್ನು ಶ್ರೀ. ಟಿ. ಪ್ರಕಾಶಂ ಅವರಂತಹ ತಿಳಿದವರಿಗೆ ನಾವು ಸೂಚಿಸಬೇಕಾದ ಅವಶ್ಯಕತೆಯಿಲ್ಲ; ಕಾಲಕ್ರಮೇಣ ಇಲಾಖೆಗಳ ಅಧಿಕಾರವು ಸರಿಯಾಗಿ ಹಂಚಲ್ಪಡಬಹುದು.

ಶ್ರೀ. ಪ್ರಕಾಶಂ ಅವರೂ ಅವರ ಅನುಯಾಯಿಗಳೂ ಬಹಳ ಕಷ್ಟಕಾಲದಲ್ಲಿ ಅಧಿಕಾರ ವಹಿಸಿದ್ದಾರೆ. ಆಧಿಪತ್ಯದ ಒಂದು ಸಣ್ಣ ಪಂಗಡವು ಮಂತ್ರಿಮಂಡಲದೊಡನೆ ಸಹಕರಿಸದೆ ದೂರ ನಿಂತಿದೆ. ಕಾಂಗ್ರೆಸ್ ಕಾರ್ಯಕಾರಿಗಳು ಶ್ರೀ. ಪ್ರಕಾಶಂ ಅವರ ಮಂತ್ರಿಮಂಡಲದ ವಿಷಯದಲ್ಲಿ ವಹಿಸಬೇಕಾದಷ್ಟು ಶ್ರದ್ಧೆಯನ್ನು ವಹಿಸುತ್ತಿಲ್ಲ. ಅವರನ್ನೂ ತಮ್ಮ ಮಾತಿಗೆ ಮದ್ರಾಸಿನವರು ಬೆಲೆ ಕೊಡಲಿಲ್ಲವಲ್ಲಾ ಎಂದು ಪರಿತಪಿಸುತ್ತಿರುವಂತೆ ತೋರುತ್ತದೆ. ದೊಡ್ಡ ಭೀಕರ ಬರಗಾಲವು ದೇಶವನ್ನು ಆವರಿಸುವುದರಲ್ಲಿದೆ. ಶ್ರೀ. ರಾಜಗೋಪಾಲಾಚಾರ್ಯರು ಹೊರಿಸಿದ ಹಲವಾರು ತೆರಿಗೆಗಳಿಂದ ಬಡ ವ್ಯಾಪಾರಿಗಳ ಆರ್ಥಿಕ ಸ್ಥಿತಿಯೇ ಹಾಳಾಗಿದೆ. ಈ ಎಲ್ಲ ವಿಷಯಗಳಿಗೂ ಶ್ರೀ. ಪ್ರಕಾಶಂ ಅವರು ಗಮನ ಕೊಡಬೇಕಾಗುವುದು; ಆದರೆ ಮಂತ್ರಿಗಳು ತಮ್ಮ ಕರ್ತವ್ಯವನ್ನು ಧೈರ್ಯದಿಂದ ಮುಂದರಿಸಿಕೊಂಡು ಹೋಗುವರೆಂದು ನಂಬಿದ್ದೇವೆ. ಜನತೆಯು ಇವರಿಗೆ ಸಂಪೂರ್ಣ ಬೆಂಬಲವನ್ನು ಕೊಡುವುದೆಂಬ ಭರವಸೆಯು ನಮಗಿದೆ. ಶ್ರೀ. ಪ್ರಕಾಶಂ ಅವರನ್ನೂ ಅವರು ನೇಮಿಸಿದ ಮಂತ್ರಿಗಳನ್ನೂ ಹೃತ್ಪೂರ್ವಕ ಅಭಿನಂದಿಸುತ್ತೇವಲ್ಲದೆ ಅವರ ಆಡಳಿತವು ಸುಗಮವಾಗಿ ನಡೆಯಲೆಂದೂ ಹಾರೈಸುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡ್ಡಾಯ ಶಿಕ್ಷಣ ಪ್ರಸಾರ

ಡಿಸ್ಟ್ರಿಕ್ಟ್ ಬೋರ್ಡು ಆಡಳಿತೆಗೆ ಒಳಪಟ್ಟ ೨೩ ಗ್ರಾಮಗಳಲ್ಲಿ, ಕಳೆದ ವರ್ಷ ಕಡ್ಡಾಯ ಶಿಕ್ಷಣವು ಜಾರಿಗೆ ಬಂದಿದೆ. ಈ ಗ್ರಾಮಗಳಲ್ಲಿ ಸುಮಾರು ೫೦೦೦ ಬಡ ಮಕ್ಕಳಿಗೆ ಸ್ಲೇಟು ಪುಸ್ತಕಗಳನ್ನು ಧರ್ಮಾರ್ಥವಾಗಿ ಹಂಚಿದುದು ಮಾತ್ರವಲ್ಲದೆ, ಅವರಿಗಾಗಿ ಮಧ್ಯಾಹ್ನದ ಊಟದ ಏರ್ಪಾಡು ಸಹ, ಸರಕಾರದ ಸಂಪೂರ್ಣ ಸಹಾಯದಿಂದ ನಡೆದಿದೆ. ಈ ಗ್ರಾಮಗಳಲ್ಲಿ, ಇಷ್ಟರ ಒಳಗೆ, ಸುಮಾರು ೬೫ ಭೋಜನಶಾಲೆಗಳ ಏರ್ಪಾಡು ನಡೆದು, ಅವುಗಳಲ್ಲಿ ಸುಮಾರು ೫೦೦೦ ಮೇಲ್ಪಟ್ಟ ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡುತ್ತಾ ಇದೆ. ಈ ಊಟದ ಏರ್ಪಾಡಿಗಾಗಿ, ಪ್ರತಿ ತಿಂಗಳಲ್ಲಿ ಸುಮಾರು ರೂ. ೧೦,೦೦೦ ಖರ್ಚು ಆಗುತ್ತಿದೆ. ಈ ಊಟದ ವ್ಯವಸ್ಥೆಯನ್ನು ನಡೆಸುವುದಕ್ಕೂ ನೋಡಿಕೊಳ್ಳುವುದಕ್ಕೂ ಸ್ಥಳೀಕ ಕಮಿಟಿಗಳು ನೇಮಕ ಮಾಡಲ್ಪಟ್ಟಿವೆ. ಈ ಕಮಿಟಿಯ ಚೆಯರ್‌ಮೇನರು ಕಾರ್ಯದರ್ಶಿಯ ಸಹಾಯದಿಂದ, ಸರಿಯಾದ ಲೆಕ್ಕ ಪತ್ರಗಳನ್ನು ಇಟ್ಟು, ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡುವ ಮುಂಗಡ ಹಣವನ್ನು ಉಪಯೋಗಿಸಿಕೊಂಡು, ಭೋಜನದ ವ್ಯವಸ್ಥೆಯನ್ನು ಮಾಡುತ್ತಾ ಇದ್ದಾರೆ. ಈ ಕಮಿಟಿಯವರು, ಹೆಚ್ಚಾಗಿ, ಊರವರ ಸಹಾಯದಿಂದಲೇ ಪಾತ್ರೆಗಳನ್ನು ಒದಗಿಸಿಕೊಂಡಿದ್ದಾರೆ. ಹಲವು ಸ್ಥಳಗಳಲ್ಲಿ, ಭೋಜನಶಾಲೆ ಅಡಿಗೆ ಮನೆ ಇವುಗಳನ್ನೂ ಊರಿನವರೇ ಕಮಿಟಿಯವರಿಗೆ ಒದಗಿಸಿ ಕೊಟ್ಟಿರುವುದೂ ಉಂಟು. ಕಡ್ಡಾಯ ಶಿಕ್ಷಣ ಜಾರಿಗೆ ಬಂದುದರಿಂದ, ಕಳೆದ

ಸಂಯುಕ್ತ ಜನಾಂಗ ಸಂಸ್ಥೆಯ ಕೈಲಾಗದಿದ್ದರೆ . . !

—o—

ಭಾರತದವರು ಬೊಬ್ಬಿಡುತ್ತಿದ್ದಂತೆಯೇ, ಆಕ್ಷೇಪಿಸಿ ನಿಷೇಧಿಸುತ್ತಿದ್ದಂತೆಯೇ ದಕ್ಷಿಣ ಆಫ್ರಿಕದವರು ಅದನ್ನೊಂದನ್ನೂ ಎಳ್ಳಷ್ಟೂ ಲಕ್ಷಿಸದೆ, ತಮ್ಮ ಕೆಲಸವನ್ನು ಸಾಗಿಸಿಯೇ ಬಿಟ್ಟರು. ಆಸ್ಯಾದವರ ಭೂಸೊತ್ತಿನ ಮಸೂದೆಯೂ, ಭಾರತೀಯರ ಪ್ರಾತಿನಿಧ್ಯದ ಮಸೂದೆಯೂ ಮೂರನೇ ಬಾರಿಯಾಗಿ ಯೂನಿಯನ್ ಎಸೆಂಬ್ಲಿಯಲ್ಲಿ ವಾಚನವಾಗಿ, ಶ್ರವಣವಾಗಿ ಕೊನೆಗೂ ಮಂಜೂರಾಗಿಯೇ ಹೋಯಿತು. ವರ್ಣಸಂಬಂಧವಾದ, ಜಾತಿವಾರಿನ ಅಹಂಕಾರವನ್ನೊಳಗೊಂಡ ಆ ಮಸೂದೆ ಅತ್ಯಂತ ಹೀನವಾಗಿದೆಯಷ್ಟೇ ಅಲ್ಲದೆ, ಅದನ್ನೂ ಎದುರಿಸ ಹೊರಟ ಯಾವತ್ತೂ ಬಿಳಿ ಮಂದಿಗಳ ಪಾರ್ಟಿಗಳು ಆ ಕಾಲಕ್ಕೆ ತೋರಿದ ಮನೋವೃತ್ತಿಯು ಬಹು ನಿಂದನೀಯವೂ ಆಗಿದೆ. ಇಷ್ಟಾಗಿ ಆ ಮಸೂದೆ ಒದಗಿಸಿ ಕೊಟ್ಟ ಮಹಾ ಸೌಭಾಗ್ಯವೇನು? ಸೆನೆಟ್ ನಲ್ಲಿ "ಹಿಂದೀಯರ ಪ್ರಾತಿನಿಧ್ಯಕ್ಕಾಗಿ ಇಬ್ಬರು ಬಿಳಿ ಮಂದಿ"ಯಷ್ಟೇ. ಇದೂ ಕೂಡ ಆ ಪಾರ್ಟಿಗಳಿಗೆ ಸಹಿಸಕೂಡದಾಯಿತು. ಹಾಗೆ ಈ ಒಗೆಯ ಪ್ರಾತಿನಿಧ್ಯಕ್ಕೂ ಆನರು ತಿದ್ದುಪಡಿಗಳನ್ನು ತಂದರು. ನ್ಯಾಶನಲಿಸ್ಟ್ ಪಾರ್ಟಿಯ ಒಬ್ಬ ಮೆಂಬರನು ನೇಟಾಲಿನ ಕೆಲವು ಜಿಲ್ಲೆಗಳಲ್ಲಿ ಓಟಿನ ಹಕ್ಕು ಇರಲೇ ಬಾರದೆಂದು ತಿದ್ದುಪಡಿ ಸೂಚಿಸುತ್ತ—ಎಫ್.ಎಂ. ಸ್ಮಟ್ಸರು ತಮ್ಮನ್ನು ಸಮರ್ಥಿಸುವವರ ಆಲೋಚನೆಯನ್ನೇ ಕೇಳಿದರೂ ಕೂಡ, ಅವರು ಹಿಂದೀಯರಿಗೆ ಓಟಿನ ಹಕ್ಕೇ ಕೂಡದೆಂದೂ, ಎಸೆಂಬ್ಲಿಯಲ್ಲಿ ಆ ನಾಡಿನವರ ಹಿಂದೀಯರ ಪರವಾದ ಪ್ರಾತಿನಿಧ್ಯ ಇರಲೇ ಕೂಡದೆಂದೂ ಹೇಳುವರೆಂದೇ ತಿಳಿಸಿದರು. ಡೊಮೊನಿಯನ್ ಪಾರ್ಟಿಯ ಒಬ್ಬ ಮೆಂಬರರು; ಎಸೆಂಬ್ಲಿಯಲ್ಲಿ ಇರಬೇಕೆಂದು ಸೂಚಿಸಲಾದ ಆ ಹಿಂದೀ ಪ್ರಾತಿನಿಧ್ಯಕ್ಕೆ ಎದುರಾಡುತ್ತ,—ನೇಟಾಲ್ ಪ್ರಾಂತಿಕ ಕೌನ್ಸಿಲಿಗೆ ಹಿಂದೀಯರನ್ನಾರಿಸಲು ಅವಕಾಶ ಕೊಡುವುದು "ನೇಟಾಲಿನ ತಲೆಯ ಮೇಲೆ ತಂದು ಹೇರುವ ಮಾನಭಂಗದ ಕಿರೀಟ"ವೆಂದೇ ಸಾರಿದರು.

ಆ ಮಸೂದೆಯ ಚರ್ಚಾ ಕಾಲದಲ್ಲಿ ಮಾಡಿದ ಭಾಷಣಗಳು ವರ್ಣದ್ವೇಷದ ಉರಿಯನ್ನು ಕಾರುವ ಅಸಹ್ಯಕರ ರೀತಿಯದಾಗಿದ್ದುವು. ಆದಕ್ಕೆ ಇಂಡಿಯದ ಉತ್ತರವೇನು? ಎಸೆಂಬ್ಲಿ ಮಂದಿರದಲ್ಲಿ ಸರಕಾರದ ಪರವಾಗಿ ಸರ್ ಎ. ರಾಮಸ್ವಾಮಿ ಮೊದಲಿಯಾರರು ಮಾತಾಡುತ್ತ "ಯಾರ ಕರ್ತವ್ಯವು ಜನಾಂಗಗಳೊಳಗೆ ನ್ಯಾಯದಾನದ ತಕ್ಕಡಿಯನ್ನು ಸರಿದೂಗಿಸುವುದಾಗಿದೆಯೋ ಆ "ಸಂಯುಕ್ತ ಜನಾಂಗ ಸಂಸ್ಥೆ"ಯ ಮುಂದೆಯೇ ಈ ವಿಚಾರವನ್ನು ಇರಿಸಲಾಗುವುದು" ಎಂದು ಸುಲಭದಲ್ಲಿ ಮುಗಿಸಿಬಿಟ್ಟರು. "ಅದು ಬ್ರಿಟಿಶ್ ಕಾಮನ್ ವೆಲ್ತಿನ ಇತಿಹಾಸದಲ್ಲಿ ಮೊದಲೆಂದೂ ಕಾಣದ ಅಪೂರ್ವಕಾರ್ಯಕ್ರಮ"ವೆಂದೂ ಹೇಳಿಕೊಂಡರು. ಆದರೆ ಈ ಮಾನ್ಯ ಮೆಂಬರರ ಆತ್ಮೋಪಕಾರ ಬುದ್ಧಿಯ ಪ್ರಾಮಾಣಿಕ ಪ್ರದರ್ಶನವನ್ನು ಕಂಡು ಒಬ್ಬನು ಅದೇನು ನಗಬೇಕೋ, ಅಳಬೇಕೋ ತಿಳಿಯದು. ಎಫ್. ಎಂ. ಸ್ಮಟ್ಸರಿಗೆ ಯಾರು ಯಾರು, ಯಾವುದು ಯಾವುದು, ಎಂಬುದು ಚೆನ್ನಾಗಿ ತಿಳಿದಿದೆ. ವೈಸರಾಯರ ಎಗ್ಜಿಕ್ಯೂಟಿವ್ ಕೌನ್ಸಿಲಿನ ಒಬ್ಬ ಹಿಂದೀ ಸಚಿವರೆಂದರೆ ಯಾರು? ಅವರಿಗೆ ತಿಳಿಯದೆ? ಈ ಒಂದು ವಿಷಯದಲ್ಲಿ, ಇಂಡಿಯಾ ಸರಕಾರವೂ ಕೇಂದ್ರ ಎಸೆಂಬ್ಲಿಯೂ ಒಂದೇ ಅಭಿಪ್ರಾಯ ಪಟ್ಟದ್ದೇನೋ ಮಹಾ ಅಪೂರ್ವ ಸಂಘಟನೆಯೇ ಎಂಬಂತೆ, ಸರ್. ರಾಮಸ್ವಾಮಿ ಮೊದಲಿಯಾರರು ಸಂತೋಷ ಸೂಚಿಸಿದ್ದಾರೆ. ಸೂಚಿಸಲಿ! ಆದರೆ ಆ ಇಂಡಿಯಾ ಸರಕಾರವಾದರೂ ಎಂಥದು? ಹೇಳಬಾರದೇ?—ಅದು ಸಾರ್ವಭೌಮ ಸರಕಾರದ ಒಂದು ಅಧೀನ ಶಾಖೆಯಲ್ಲವೇ? ಮತ್ತೆ ದಕ್ಷಿಣ ಆಫ್ರಿಕದಲ್ಲಿ ನೆಲಸಿದ ಭಾರತ ಸಂತಾನದವರ ಬೆಲೆ—ಅದಾದರೂ ಯಾರಿಗೆ ತಿಳಿಯದು? ತಮ್ಮ ದೇಶದಲ್ಲೇ ಅವರು ದಾಸರಾಗಿರುತ್ತ, ಅವರು ಇನ್ನೊಂದು ದೇಶದ ನಾಗರಿಕರೆಂದು ಹಕ್ಕು ಸ್ಥಾಪಿಸಲು ಶಕ್ತರೆ? ಈ ತೊಂದರೆಯ ಮೂಲವು ನೋಡಿ—ಸೂಚಿಸಲಾದ ಈ ಕಾನೂನು "ಪ್ರತ್ಯೇಕವಾಗಿ ಗೃಹಕೃತ್ಯಕ್ಕೇ ಸಂಬಂಧಿಸಿದ್ದು" ಎಂಬ ದಕ್ಷಿಣ ಆಫ್ರಿಕದ ಸರಕಾರದ ವಾದದಲ್ಲಿ ಅಡಗಿಲ್ಲ. ಮತ್ತೇನೆಂದರೆ, ದಕ್ಷಿಣ ಆಫ್ರಿಕದ ಬ್ರಿಟಿಶರೂ ಬೂವರ ಜನಗಳೂ ಆ ದೇಶವನ್ನು ತಮ್ಮದೆಂದೇ ತಮ್ಮ ಹಿರಿಯರಿಂದ ತಮಗೆ ಬಂದುದೆಂದೇ ಭಾವಿಸಿ, ಅಲ್ಲಿನ ಮೂಲ ನಿವಾಸಿಗಳನ್ನೂ, ಹಿಂದೀಯರನ್ನೂ ಕೇವಲ "ಏದೇಶೀಯ"ರೆಂದು ಎಣಿಸಿರುವುದೇ ಈ ಅವಾಂತರಕ್ಕೆ ಕಾರಣ. ಬಿಳಿ ಆಸ್ಟ್ರೇಲಿಯದ ಕಾರ್ಯನೀತಿಯು ಹಿನ್ನೆಲೆಯಲ್ಲಿಯಾದರೂ, ಇದೇ ರೀತಿಯ "ಭೂಸ್ವಾಮಿತ್ವ"ದ ಮನೋಭಾವವೇ ಹೊಗೆಯಾಡುತ್ತಿದೆ. ಸುಲಿಗೆಯನ್ನು ದೈವಿಕ ಹಕ್ಕೆಂದು ತೋರಿಸುವ ಭರದಲ್ಲಿ ಅದಕ್ಕೆ ತಕ್ಕ ಕೀರ್ತಿಯ ಲೇಪನವನ್ನು ಬಳಿಯ ಹೊರಡುವ ಆ ಬಿಳಿಯವರ ಅಭ್ಯಾಸಕ್ಕೆ, ಆಸ್ಯದ ಮತ್ತು ಆಫ್ರಿಕದ ಸ್ವಾತಂತ್ರ್ಯದ ಆಂದೋಲನಗಳೇ ತಕ್ಕ ಮದ್ದು ಅರೆಯಬೇಕಾಗಿದೆ.

(೯ನೇ ಪುಟ ನೋಡಿ)

ವರ್ಷ ನಮ್ಮ ಜಿಲ್ಲೆಯಲ್ಲಿ ಸುಮಾರು ೪, ೫ ಸಾವಿರ ಮಕ್ಕಳು ಹೆಚ್ಚಿಗೆಯಾಗಿ ಶಾಲೆಗೆ ಬಂದಿದ್ದಾರೆ.

ಕಳೆದ ತಾ. ೨೨ನೇ ಸೋಮವಾರ ದಿನ ನಡೆದ ಡಿಸ್ಟ್ರಿಕ್ಟ್ ಬೋರ್ಡಿನ ವಿಶೇಷ ಎಜುಕೇಶನಲ್ ಆಫೀಸರ್ ಎದ್ವಾನಹೊಸಬೆಟ್ಟ ರಾಮರಾವ್ ಎಂ. ಎ. ಎಲ್. ಟಿ. ಬಿ ಓ ಎಲ್. ಅವರು "ಕಡ್ಡಾಯ ಶಿಕ್ಷಣ ಪ್ರಸಾರ" ಮತ್ತು ಆ ಕುರಿತು, ಆಡಳಿತ ಸಂಸ್ಥೆಗಳ ಹಾಗು ಊರ ಮಹನೀಯರ ಹೊಣೆಗಾರಿಕೆಗಳ ಕುರಿತು, ಅಗತ್ಯವಿರುವ ವಿಷಯಗಳನ್ನು ವಿವರಿಸಿ, ಭಾಷಣ ಮೂಲಕ ತಿಳಿಸಿದರು. ಅವರು ಕೇಳಿಕೊಂಡಂತೆ ಊರ ಮಹನೀಯರ ಸಹಾನುಭೂತಿಯಿಂದ, ಅಗತ್ಯವಿರುವ ಕಟ್ಟಡವೊಂದು ಒದಗಿಸಲ್ಪಟ್ಟರೆ, ಕಡ್ಡಾಯ ಶಿಕ್ಷಣ ಬೇಗನೇ ಜಾರಿಗೆ ಬರುವುದರಲ್ಲಿ ಸಂದೇಹವಿಲ್ಲ. ಆ ಬಗ್ಗೆ, ಆ ದಿನದ ಸಭೆಯಲ್ಲಿ, ಶ್ರೀ ಶಾಂತಿರಾಜಯ್ಯನವರೇ ಮುಂತಾದವರಿಂದ ಸುಮಾರು ರೂ. ೧೧೩೦ರಷ್ಟು ಸಂಗ್ರಹದ ವಾಗ್ದಾನ ನಡೆದಿದೆ. ಪ್ರಗತಿಯ ಮೇಲೆ ಪ್ರಗತಿ ಸಾಗುತ್ತಿರಲೆಂದು ನಮ್ಮ ಕೋರಿಕೆ.

ಓರ್ವ ವಿದ್ಯಾಭಿಮಾನಿ.

—೫*೫—

ತಾ. ೨೮-೪-೪೬ನೇ ಆದಿತ್ಯವಾರ ಎರ್ಮಾಳು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆದ ಹೆತ್ತವರ

THE BOMBAY— CO-OPERATIVE INSURANCE SOCIETY LTD. BOMBAY.

ಬೋಂಬೆ ಕೊ-ಒಪರೇಟಿವ್ ಇನ್ಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್, ಬೋಂಬೆ.

ವಿಮಾಕಾರ್ಯಗಳ ವಿಶೇಷ ಯೋಜನೆಗಳು
ಪ್ರತ್ಯೇಕವಾಗಿ ಗ್ರಾಮಾಂತರ ಶಾಖೆಯ
ಪಾಲಿಸಿಗಳು
ನಿಮ್ಮ ಜೀವವಿಮೆಗಾಗಿ ಅಥವಾ
ಪ್ರಾತಿನಿಧ್ಯಕ್ಕಾಗಿ ಯಾವಾಗಲೂ ಇವರೊಡನೆ ಆಲೋಚಿಸಿರಿ,
"ಬೋಂಬೆ ಕೊ-ಒಪರೇಟಿವ್"

ದಿ ನ್ಯೂ ಇಂಡಿಯಾ ಕೊ., ಲಿಮಿಟೆಡ್,
ಚೀಫ್ ಏಜಂಟರು,
44, ಲಜ್ ಚರ್ಚ್ ರೋಡ್, ಮೈಲಾಪುರ
ಮದ್ರಾಸು.

ಎಂ. ಟಿ. ಕೊರ್ಡೇಲ್,
ಸುಪರಿಂಟೆಂಡೆಂಟ್ ಒಫ್ ಏಜನ್ಸೀಸ್,
ಹಂಪನಕಟ್ಟಾ, ಮಂಗಳೂರು.

ಹಿಂದೀ ಸ್ವಾತಂತ್ರ್ಯ–ಪಾಕಿಸ್ತಾನ ಸ್ಥಾಪನೆ–ಮದ್ರಾಸು ಗೊಂದಲ–ಇಂಡೋನೇಸ್ಯ

ಪೆಲೆಸ್ಟಿನುಗಳಲ್ಲಿ ಅಶಾಂತಿ–ದಕ್ಷಿಣ ಆಫ್ರಿಕ ಹಿಂದೀಯರಿಗೆ ಘಟ್ಟೋಸ್ಥಾಪನೆ

ಇದೇ ಮೇ ತಿಂಗಳ ೫ನೇ ರವಿವಾರ ಹಿಂದೀ ಸ್ವಾತಂತ್ರ್ಯದ ಸಮಸ್ಯೆಯನ್ನು ಬಗೆ ಹರಿಸಲಿಕ್ಕಾಗಿ ತ್ರಿಪಕ್ಷ ಸಂವಾದಗಳು ಸಿಮ್ಲದಲ್ಲಿ ಪ್ರಾರಂಭಿಸಿವೆ. ಬ್ರಿಟಿಶ್ ಸಚಿವರೊಂದಿಗೆ ಕಾಂಗ್ರೆಸ್ಸಿನ ಮುಸ್ಲಿಮರಿಬ್ಬರು, ಲೀಗಿನ ಮುಸ್ಲಿಮರು ನಾಲ್ವರು, ಕಾಂಗ್ರೆಸ್ ಹಿಂದುಗಳಿಬ್ಬರು ಸೇರಿ ಭಾರತದ ಭವಿಷ್ಯವನ್ನು ನಿರ್ಣಯಿಸುವರು. ಬ್ರಿಟಿಷ್ ಸಚಿವರು ಏಪ್ರಿಲ್ ತಿಂಗಳ ಅಂತ್ಯದಲ್ಲಿ ದಿಲ್ಲಿಯಿಂದ ಹೊರಡುವಾಗ ಕೊಟ್ಟ ಸೂಚನೆಗಳಲ್ಲಿ ಪಾಕಿಸ್ತಾನವು ರೂಪಿತವಾಗಿದೆಯೆಂದು ಲೀಗಿನ ಪಕ್ಷದಲ್ಲಿ ಜಯಘೋಷವು ಕೇಳಿ ಬರುತ್ತಿದೆ. ಈ ಪುಣ್ಯ ಭೂಮಿಯನ್ನು ಹಿಂದೂ ಪ್ರಾಂತಗಳ ನಾಡಕೂಟವೊಂದು, ಮುಸ್ಲಿಮ್ ಪ್ರಾಂತ್ಯಗಳ ನಾಡ ಕೂಟವೊಂದು, ನರೇಂದ್ರಪಾಲಿತ ಸಂಸ್ಥಾನಗಳೊಂದು–ಹೀಗೆ ಮೂರು ಕೂಟಗಳಾಗಿ ಪ್ರಕೃತಕ್ಕೆ ಎಂಗಡಿಸಿ,–ಬ್ರಿಟಿಶ್ ಆಡಳಿತೆಯಲ್ಲಿರುವ ಪ್ರಾಂತಗಳ ಎರಡು ನಾಡ ಕೂಟಗಳ ಮೇಲೆ ಹಿಂದೀ ಸಂಘವೊಂದನ್ನು ರಚಿಸಿ,–ಆ ಹಿಂದೀ ಸಂಘವು ನರೇಂದ್ರ ಪಾಲಿತ ಸಂಸ್ಥಾನಗಳೊಂದೊಂದನ್ನೇ ಪರಸ್ಪರ ಒಡಂಬಡಿಕೆಗನುಸಾರವಾಗಿ ತನ್ನಲ್ಲಿ ಸೇರಿಸಿಕೊಳ್ಳುವಂತೆ ವ್ಯವಸ್ಥೆಯನ್ನು ಮಾಡಬಹುದೆಂದು ಬ್ರಿಟಿಷ್ ಸಚಿವರ ಸೂಚನೆಯಾಗಿದೆ. ಕೇಂದ್ರ ಸರಕಾರಕ್ಕೆ ನಾಡ ಕೂಟಗಳು ದೇಶ ರಕ್ಷಣೆ, ವಿದೇಶ ವ್ಯಾಪಾರ, ಸುಂಕ ಮತ್ತು ವಹಿವಾಟು, ಚಲನ ಸಾಧನಗಳ ಮೇಲಿನ ಅಧಿಕಾರಗಳನ್ನು ಒಪ್ಪಿಸಿ, ಉಳಿದ ಅಧಿಕಾರಗಳನ್ನು ತಾವು ಸ್ವಾತಂತ್ರ್ಯದಿಂದ ಅನುಭವಿಸಬಹುದಾಗಿ ಸೂಚನೆಯಲ್ಲಿ ಹೇಳಿದೆ. ಹಿಂದೀ ಐಕ್ಯತೆಯು ಈ ವ್ಯವಸ್ಥೆಯಿಂದ ಕೆಲವು ಮಟ್ಟಿಗೆ ಸಿದ್ಧಿಸಿದರೂ ಹಿಂದೂ ಮುಸ್ಲಿಮರು ಮುಂದಾದರೂ ಒಟ್ಟಾಗುವ ಸಂದರ್ಭಗಳು ದೂರವಾಗಬಹುದು, ಕಾಂಗ್ರೆಸ್ಸಿನ ಪಕ್ಷದಲ್ಲಿ ಸಮಾಧಾನವಿಲ್ಲ. ಆದರೆ ಪ್ರತಿಘಟನೆಯೂ ತೋರುವುದಿಲ್ಲ. ಈಗಿನ ಸಮಸ್ಯೆಯನ್ನು ಬಿಡಿಸಿದಂತಾಯಿತು; ಮುಂದೇನು ಸಮಸ್ಯೆಗಳು ತಲೆದೋರಬಹುದೆಂದು ದೇಶಪ್ರೇಮಿಗಳಿಗೆಲ್ಲಾ ಚಿಂತೆಗೆ ಕಾರಣವಾಗಿಯದೆ.

ಹಿಂದೀ ಸ್ವಾತಂತ್ರ್ಯ ಸ್ಥಾಪನೆಯ ಕಾರ್ಯ ಭಾಗಗಳು ಹೀಗೆ ಮುಂದುವರಿಯುತ್ತಿರುವಾಗ ಹಿಂದುಸ್ಥಾನದಲ್ಲಿ ಆಹಾರ ಸಮಸ್ಯೆಯಿನ್ನೂ ಬಗಿಯಾಗಿಯೇ ಉಳಿದಿದೆ. ಭಾರತದ ಕೋಟಿ ಜನರ ದುರವಸ್ಥೆಯ ಕಡೆ ಬಲಿಷ್ಠ ಮಹಾ ರಾಷ್ಟ್ರವಾದ ಅಮೇರಿಕವು ಅಲಕ್ಷ್ಯವನ್ನೇ ತೋರಿಸುತ್ತಿದೆ. ಅಮೇರಿಕದಲ್ಲಿ ಬೇಕಾದಷ್ಟು ಆಹಾರ ಸಾಮಗ್ರಿಗಳು ತುಂಬಿರುವವಾದರೂ ಅವುಗಳು ಚೀನ, ಜಪಾನ್ ಯುರೋಪುಗಳಿಗೆ ಹೋಗುವಂತಿವೆಯಲ್ಲದೆ ಹಿಂದುಸ್ಥಾನಕ್ಕೆ ಬರುವಂತಿಲ್ಲವೆಂದು ತೋರುತ್ತದೆ. ಹಿಂದೀ ಸಾಗರಕ್ಕೊಪ್ಪಿದ ದೇಶಗಳಿಂದ ಆಹಾರ ಸಾಮಗ್ರಿಗಳನ್ನು ಬ್ರಿಟಿಷರೇ ಸಂಗ್ರಹಿಸಿ ಹಿಂದುಸ್ಥಾನಕ್ಕೆ ಕಳುಹಿಸಬೇಕೆಂದು ಅಮೇರಿಕದ ಸರಕಾರವು ನಿರ್ಣಯಿಸಿದೆಯೆಂದೂ ತೋರುತ್ತದೆ, ಸಿಯಾಮಿನಿಂದಲೂ ಇಂಡೋನೇಸ್ಯದಿಂದಲೂ ಸಿಕ್ಕಬಹುದಾದ ಅಕ್ಕಿ ಕೂಡ ಹಿಂದುಸ್ಥಾನಕ್ಕೆ ಮುಟ್ಟುವಂತಿಲ್ಲ. ಒಟ್ಟಾರೆ ಹಿಂದುಸ್ಥಾನದ ಕಷ್ಟ ಕಾಲದಲ್ಲಿ ಹಿಂದೀಯರೊಡನೆ ಪಾಶ್ಚಾತ್ಯರಲ್ಲಾರೂ ನಿಜವಾದ ಸಹಾನುಭೂತಿಯನ್ನು ತೋರಿಸುವಂತಿಲ್ಲ. ಮದ್ರಾಸು ಪ್ರಾಂತ್ಯಕ್ಕೆ ಈ ತಿಂಗಳಲ್ಲಿ ೩೦,೦೦೦ ಟನ್ (ಸುಮಾರು ೭೫೦,೦೦೦ ಮುಡಿ) ಗೋಧಿಯು ಹೊರ ದೇಶಗಳಿಂದ ಬರಬಹುದೆಂದೂ ಅದರ ಪೈಕಿ ೬೦೦೦ ಟನ್ (ಸುಮಾರು ೧೫೦,೦೦೦ ಮುಡಿ) ಗೋಧಿಯು ಮದ್ರಾಸಿಗೆ ಮುಟ್ಟಿದೆಯೆಂತಲೂ ಮದ್ರಾಸು ಸರಕಾರದ ಆಹಾರ ಖಾತೆಯ ಕಾರ್ಯದರ್ಶಿಗಳಿಂದ ತಿಳಿದು ಬರುತ್ತಿದೆ. ಮುಂದಣ ಅತೀ ಕಷ್ಟದ ತಿಂಗಳುಗಳಾದ ಜುಲ್ಯೈ, ಆಗೋಸ್ತು ಸಪ್ಟಂಬರಗಳಲ್ಲಿ ಬರಗಾಲವು ಯಾವ ಭೀಕರ ರೂಪವನ್ನು ಎಲ್ಲೆಲ್ಲಾ ತಾಳಬಹುದೆಂದು ಈಗ ಹೇಳ ಸಾಧ್ಯವಿಲ್ಲ.

ಹೊರಗಿನಿಂದ ಬರುವ ಆಹಾರ ಸಾಮಗ್ರಿಗಳ ಕಷ್ಟವು ಹೀಗಿರುವಾಗ ರೈಲ್ವೆಗಳಲ್ಲಿ ಕೆಲಸಗಾರರೆಲ್ಲಾ ಮುಷ್ಕರ ಪ್ರಾರಂಭಿಸುವ ಸಿದ್ಧತೆಯಲ್ಲಿದ್ದಾರೆ; ಆಹಾರ ಸಾಮಗ್ರಿಗಳು ಹಿಂದುಸ್ಥಾನಕ್ಕೆ ಮುಟ್ಟಿದರೂ ಬಂದರುಗಳಿಂದ ಬರಗಾಲ ಪೀಡಿತ ಪ್ರದೇಶಗಳಿಗೆ ಅವುಗಳನ್ನು ಶೀಘ್ರ ಮುಟ್ಟಿಸಲಿಕ್ಕೆ ಹೊಸ ಅಭ್ಯಂತರಗಳೇಳಬಹುದು. ಮದ್ರಾಸು ಪ್ರಾಂತ್ಯದ ಹಲವು ಜಿಲ್ಲೆಗಳಲ್ಲಿ ಗ್ರಾಮಾಧಿಕಾರಿಗಳೀಗ ತಮ್ಮ ಕೆಲಸಗಳಿಗೆ ರಾಜೀನಾಮೆಯನ್ನು ಕೊಡ ಪ್ರಾರಂಭಿಸಿರುವರು. ಹೀಗಾಗಿ ಹಳ್ಳಿಗಳಲ್ಲಿ ಅಲ್ಲಲ್ಲಿಂದ ಶೇಖರಿಸಲಿಕ್ಕಿನ್ನೂ ಉಳಿದಿರುವ ಧಾನ್ಯಗಳೂ ಅಲ್ಲಲ್ಲಿಯೇ ಉಳಿಯಬಹುದು. ಮದ್ರಾಸು ಮಂತ್ರಿಮಂಡಲಕ್ಕೆ ಕಾಂಗ್ರೆಸ್ ಮುಖಂಡರ ಸಹಾನುಭೂತಿ ಇಲ್ಲ. ಅದರ ಹದಿಮೂರು ಮಂತ್ರಿಗಳಲ್ಲಿ ಕೇರಳದವರ್ಯಾರೂ ಇಲ್ಲವೆಂದು ಕೇರಳದವರಿಗೆ ಬೇಸರವಿದೆ. ಮುಸ್ಲಿಮರ್ಯಾರೂ ಇಲ್ಲವೆಂದು ಮುಸ್ಲಿಮರಿಗೂ ಬೇಸರವಿರಬಹುದು.

ಶ್ರೀ. ರಾಜಾಜಿ ಪಕ್ಷದವರು ಮಂತ್ರಿ ಮಂಡಲದೊಳಗೆ ಸಂಪೂರ್ಣ ಸಹಕರಿಸುವಂತಿಲ್ಲ. ಈ ರೀತಿಯ ಒಳಗಿನ ಮನಃಕ್ಲೇಶಗಳೊಂದಿಗೆ ಪ್ರಾಂತ್ಯದ ಕಷ್ಟಗಳ ಭಾರವನ್ನೂ ಹೊರಬೇಕಾದ ನಮ್ಮ ಮಂತ್ರಿಮಂಡಲಕ್ಕೆ ಎಶ್ರಾಂತಿಗೆ ಎಡೆದೋರಲಿಕ್ಕೆ ಅನೇಕ ದಿನಗಳು ಬೇಕಾಗಿ ಬರಬಹುದು.

ಭೂಲೋಕವೀಗ ಅಶಾಂತಿಯಿಂದ ತುಂಬಿರುವಾಗ್ಗೆನಮ್ಮ ಪ್ರಾಂತ್ಯದ ನಮ್ಮ ದೇಶದ ಕಷ್ಟಗಳೂ ಹೆಚ್ಚಾಗುತ್ತಿರುವುದರಲ್ಲಿ ಆಶ್ಚರ್ಯವಿಲ್ಲ. ಇಂಡೋನೇಸ್ಯದಲ್ಲಿ ಪುನಃ ಸಮರಾಗ್ನಿಯು ಬೆಳೆಯುತ್ತಿದೆ. ಸಂಧಾನದ ಮಾತುಗಳು ನಿಷ್ಫಲವಾಗಿ ದೇಶೀಯರೂ, ಡಚ್ಚರೂ ಈಗ ರಣರಂಗದಲ್ಲಿಯೇ ತಮ್ಮ ವಿವಾದಗಳನ್ನು ಇತ್ಯರ್ಥಪಡಿಸಬೇಕಾಗಿದೆ. ಆಂಗ್ಲ ಮಂತ್ರಿಮಂಡಲದವರು ಡಚ್ಚರೊಡನೆ ಸಹಕರಿಸಿ ಡಚ್ಚ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಲೆತ್ನಿಸುತ್ತಿರುವಾಗ ಅತ್ತ ಒಸ್ಟ್ರೇಲಿಯದ ಜನರು ಇಂಡೋನೇಸ್ಯದ ಜನರೊಡನೆ ತಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸುತ್ತಿದ್ದಾರೆ. ಇಂಡೋನೇಸ್ಯದಲ್ಲಿಯೇ ಇರುವ ಬ್ರಿಟಿಷ್ ಸೈನಿಕರಿಗಾಗಲಿ ಸೇನಾಧಿಪತಿಗಳಿಗಾಗಲೀ ಡಚ್ಚರ ಕಡೆ ಸಹಾನುಭೂತಿ ಇಲ್ಲ. ತುಚ್ಛೀಕಾರವು ತುಂಬಿದೆ. ಅತ್ತ ಪೆಲೆಸ್ಟಿನಿನಲ್ಲಿ ಅರಾಬ್ ಯೆಹೂದ್ಯರ ವಿವಾದಗಳ ಕುರಿತು ಆಂಗ್ಲ ಅಮೇರಿಕಗಳ ಜತೆ ಸಮಿತಿಯು ಕೂಲಂಕುಶ ತನಿಖೆ ನಡೆಸಿ ಪ್ರಕಟಿಸಿರುವ ವರದಿಗಳಿಂದ ಅರಾಬರಲ್ಲೆಲ್ಲಾ ಅಶಾಂತಿಯು ಪ್ರಬಲವಾಗಹತ್ತಿದೆ; ಯೆಹೂದ್ಯರಿಗೆ ಸಂಪೂರ್ಣ ತೃಪ್ತಿ ಇಲ್ಲ. ಪೆಲೆಸ್ಟಿನಿನಲ್ಲಿ ಇನ್ನೂ ಒಂದು ಲಕ್ಷ ಯೆಹೂದ್ಯರನ್ನು ಬರಬಿಡಬೇಕು; ಪೆಲೆಸ್ಟಿನ್ ಕ್ರೈಸ್ತ, ಯೆಹೂದ್ಯ, ಮುಸ್ಲಿಮರೆಲ್ಲರಿಗೂ ಪವಿತ್ರ ಭೂಮಿಯಾದ್ದರಿಂದ ಅಲ್ಲಿ ಯಾರೊಬ್ಬರ ನಿರಂಕುಶ ಪ್ರಭುತ್ವವಿರಕೂಡದು; ಅರಬ್ ಯೆ

(೫ನೇ ಪುಟವನ್ನು ನೋಡಿ)

ನೀವು ಯಾವಾಗಲೂ ಸಕಾಲಕ್ಕೆ ತಲಪುವಿರಿ-
ನಿಮ್ಮ ಸೈಕಲ್ ಸವಾರಿಗೆ ಕೆಂಪು ಚಕ್ರದ ಟೈರುಗಳನ್ನು ಉಪಯೋಗಿಸಿ.
ಗವರ್ನ್‌ಮೆಂಟ್ ನೌಕರರು, ವಿದ್ಯಾರ್ಥಿಗಳು ಮತ್ತು ವ್ಯಾಪಾರಸ್ಥರು ಯಾವಾಗಲೂ ಸಕಾಲಕ್ಕೆ ಇರಬೇಕು. ತಮ್ಮ ಓಡಾಟಕ್ಕೆ ಅವರು ಸೈಕಲುಗಳನ್ನು ಆಧಾರ ಮಾಡಿಕೊಂಡಿದ್ದಲ್ಲಿ ಅವರ್ ಭರವಸೆಯುಳ್ಳ ಟೈರುಗಳನ್ನೇ ಅಪೇಕ್ಷಿಸಬೇಕು.
THE TYRES WITH THE RED RING
INDIA Super CYCLE TYRES
INDIA SUPER
INDIA TYRE & RUBBER CO. (INDIA), LTD.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ, ಲಿಮಿಟೆಡ್

ಬೊಂಬಾಯಿ—ಮದ್ರಾಸ್—ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The Badavara Bandhu Group Enterprises

Editors. Printers, Publishers, Bankers, Merchants, Fish Dealers, Motion Picture Producers, Exhibitors, Benefactors. Property Dealers, Provision Dealers, etc., etc.

THROUGH

THEIR ASSOCIATED CONCERNS

1. The Badavara Bandhu.
2. The Badavara Bandhu Printing Press, Ltd.
3. Sri Narayana Guru Press.
4. Sri Narayana Guru Bank Ltd.
5. The South Kanara Fish Industries, Ltd.
6. The Karnataka Theatres, Ltd.
7. Janasons, Ltd.
8. The Badavara Bandhu Colonies.
9. The Badavara Bandhu Orphanage Trust.
10. My Stores.
11. The Vijaya Stores, Ltd.
12. The Badavara Bandhu Hosieries.
13. The West Coast Ice Factory,

Head Office:

MANGALORE, South India.

Telegraphic address:

1 BADAVARA BANDHU

2 MONEY

Post Box: No. 110

Pandit Bank, Mangalore

ಪಂಡಿತ್ ಬ್ಯೇಂಕ್,

ಕೋರ್ಟು ರಸ್ತೆ, ಮಂಗಳೂರು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡೆಸಲಾಗುವುವು. ಮುಖ್ಯವಾಗಿ ಚಿನ್ನಾಭರಣ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು.

ಚಿನ್ನಾಭರಣ ಈಡಿನ ಮೇಲೆಹಣವನ್ನು ಕೊಡುವುದು ಈ ಬ್ಯೇಂಕಿನ ವಿಶೇಷ ಗುಣ. (Speciality) ಇದರಲ್ಲಿ ರಿಯಾಯ್ತಿಯೂ ವಿಶೇಷ–ಬಡ್ಡಿಯೂ ಬಹಳ ಸುಲಭ–ರಖಂ ದೊಡ್ಡದಾದ ಹಾಗೆ ಬಡ್ಡಿ ಮತ್ತಷ್ಟು ಕಡಿಮೆ.

ಕಾಯಂ ಠೇವಣಾತಿಗಳು:

6 ತಿಂಗಳುಗಳಿಗೆ ಸೇ. 2%

1 ವರ್ಷಕ್ಕೆ ಸೇ. 2½%

ಚಾಲ್ತಿ ಠೇವಣಾತಿ:

ಪ್ರತಿದಿನದ ಶಿಲ್ಕಿನ ಮೇಲೆ ಸೇ. ¼%

ಸೇವಿಂಗ್ಸ್ ಬ್ಯಾಂಕ್: ಸೇ. 1½%

PANDIT SHIVA RAO, B.A., LL.B.
SOLE PROPRIETOR.

PANDIT DEVADAS RAO,
AGENT.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಫುಕಟಾ

ಕಳುಹಿಸಿಕೊಡುವೆವು. ಹಿತ್ತಾಳಿ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ,

ಭ್ಯಾಂಡೆ ವ್ಯಾಪಾರಿ, ಉಡುಪಿ, ದ. ಕ.

Kalmanje Vyasacharya

Brass-ware Merchant,

UDIPI, S. I.

THE CANARA BANKING CORPORATION LIMITED.

ESTD: 1906.

(Incorporated in British India with limited liability.)

SEASON DEPOSITS.

for Rs. 10,000 and above are now accepted at all offices of the Corporation at the following rates

3—4 months 2¼% 6 months 2½%

These deposits will however not be accepted to run beyond 31—8—1946

With a net work of Branches and Agencies we offer the best of banking facilities.

XXVIII] ಮಂಗಳೂರು ತಾರೀಕು ೭—೫—೧೯೪೬ [೧೧

೧೮೬೪ ಪಾರ್ಥಿವ ಸಂವತ್ಸರದ ವೈಶಾಖ ಶು। ೬ ಮಂಗಳವಾರ

ಮದ್ರಾಸ್ ಮಂತ್ರಿಗಳ ಕಾರ್ಯಕ್ರಮಗಳು

—o—

ಕಾಂಗ್ರೆಸ್ ಹೊಸ ಮಂತ್ರಿಮಂಡಲಗಳ ಕಾರ್ಯಕ್ರಮಗಳೇನೆಂದು ತಿಳಿಯಲು ಜನರು ಆತುರಗೊಂಡಿರುವಾಗಲೇ, ನಮ್ಮ ಮದ್ರಾಸ್ ಆಧಿಪತ್ಯದ ಕೆಲ ಮಂತ್ರಿಗಳು ತಮ್ಮ ಶಾಖೆಗಳ ಮುಂದಿನ ಹೆಜ್ಜೆಯು ಕುರಿತಾಗಿ ತಮ್ಮ ಕಾರ್ಯನೀತಿ ಎಂಥದೆಂದು ಎವರಿಸ ಹೊರಟಿರುವುದು ಸಂತೋಷಪ್ರದವಾಗಿದೆ.

ಶ್ರೀ। ಎ. ಎ. ಗಿರಿ ಅವರು, ಈ ಸಂಸ್ಥಾನದ ಕೈಗಾರಿಕೆಗಳ ಸಂಬಂಧವಾದ ಸರಕಾರದ ಧೋರಣೆ ಏನೆಂದು ನಿರೂಪಿಸಿದ್ದಾರೆ. ಅವರು ಹಿಂದೆ ಕಾಂಗ್ರೆಸ್ ಸರಕಾರಗಳಲ್ಲಿನ ಕೈಗಾರಿಕೆ ಶಾಖೆಯ ಮಂತ್ರಿಗಳು ರಚಿಸಿದ್ದ 'ಸಮಗ್ರ ಭಾರತ ಯೋಜನಾ ಸಮಿತಿ"ಯ ವಿಚಾರವನ್ನು ಎತ್ತಿ ಹಿಡಿದು—ಈ ಸಮಿತಿಗೆ ಶ್ರೀ। ಸುಭಾಸರೂ ಅನಂತರ ಪಂಡಿತ ನೆಹರೂ ಅವರೂ ಅಧ್ಯಕ್ಷರಾಗಿದ್ದರು—ಅದನ್ನೇ ಜನಹಿತದೃಷ್ಟಿಯಿಂದ ಸಮರ್ಥಿಸಲಾಗುವುದೆಂದೂ ಅದರ ಉದ್ದೇಶಗಳ ಪೂರ್ಣತೆಗಾಗಿಯೇ ದುಡಿಯಲಾಗುವುದೆಂದೂ ಸೂಚಿಸಿದರು. ಕರಾಚಿ ನಿರ್ಣಯದ ಮಾತೆತ್ತಿ,ಅದನ್ನು ಜಾರಿಗೆತರುವ ಅಭಿಮಾನವನ್ನು ವ್ಯಕ್ತಪಡಿಸಿ–ಅದರಲ್ಲಿ ಖಾದಿ ಉತ್ಪತ್ತಿ ಮತ್ತು ಗ್ರಾಮಕೈಗಾರಿಕೆಗಳ ಅಭಿವೃದ್ಧಿಗಾಗಿ ಶ್ರಮಿಸಬೇಕಾದ ಅವಶ್ಯಕತೆಯುಂಟೆಂದೂ ಸಾರಿದರು. ಗುಡಿ ಕೈಗಾರಿಕೆಗಳಿಗೆ, ಅವುಗಳ ಸುವ್ಯವಸ್ಥೆಗೆ ಒದಗಬೇಕಾದ ನಾನಾ ಮುಖವಾದ ಪ್ರೋತ್ಸಾಹ ಮತ್ತು ಸಹಾಯಗಳೂ ಅಲ್ಲದೆ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿಯ ಜೋಡಣೆಯಿಂದ ಆಗಬಹುದಾದ ಪ್ರಯೋಜನಗಳೂ ಅಷ್ಟಿಷ್ಟಲ್ಲವೆಂಬುದನ್ನು ಖಚಿತ ಪಡಿಸುತ್ತ, ಈ ವಿಷಯದಲ್ಲಿ ಈ ಮಂತ್ರಿಮಂಡಲವು ಜಾರಿಗೆ ತರಬೇಕೆಂದು ಯೋಚಿಸಿರುವ ಉಪಾಯಗಳ ಸ್ಥೂಲ ಪರಿಚಯವನ್ನೂ ಮಾಡಿಸಿಕೊಟ್ಟರು. ಗುಡಿ ಕೈಗಾರಿಕೆಗಳಿಗೆ ಸರಕಾರದ ಧನ ಸಹಾಯವೊದಗುವುದೆಂದೂ, ಈ ಕೈಗಾರಿಕೆಗಳ ಅಭಿವೃದ್ಧಿಗಾಗಿ ಜಿಲ್ಲಾ ಮ್ಯುಸಿಯಮ್‌ಗಳು ಹಿಂದಿನಂತೆ ಏರ್ಪಟ್ಟುಹಾಗೆ ಆ ಕೈಗಾರಿಕೆಗಳ ನೇರವಾದ ಪ್ರಚಾರಕಾರ್ಯಕ್ಕೆ ಅನುಕೂಲಪಡಿಸಲಾಗುವುದೆಂದೂ, ಗ್ರಾಮಗಳ ಪರಿಶೀಲನೆ ನಡೆಸಿ ಅಲ್ಲಲ್ಲಿ ಕೈಕೊಳ್ಳಬಹುದಾದ ಮನೆ ಕೈಗಾರಿಕೆಗಳು—ಅಂದರೆ ಕೈಯಿಂದ ಕಾಗದ ತಯಾರಿ, ಸಾಬೂನು ತಯಾರಿ, ಚಾಪೆ ತಯಾರಿ, ಜೇನಿನ ತಯಾರಿ, ಮಕ್ಕಳ ಆಟಗಳ ತಯಾರಿ ಇವೇ ಮೊದಲಾದವುಗಳದೊಂದು ಪಟ್ಟಿಯನ್ನು ಸಿದ್ಧಗೊಳಿಸಲಾಗುವುದೆಂದೂ ಶ್ರುತಪಡಿಸಿರುವರು. ಪರದೇಶದ ಕೈಗಾರಿಕೆಗಳಿಗಾಗಿ ಇಲ್ಲಿಂದ ಹರಿದುಹೋಗುವ ಕೋಟ್ಯಾಂತರ ದ್ಯವ್ಯವು ನಮ್ಮಲ್ಲೇ ಉಳಿದು, ನಮ್ಮ ಜನಗಳಿಗೆ ಉದ್ಯೋಗ ದೊರಕಿ, ಅದರಿಂದ ಈ ದೇಶದ ಜನಗಳ ಜೀವನ ಸರಾಗವಾಗಿ ಸಾಗಬೇಕೆಂಬುದೇ ನಮ್ಮ ಸರಕಾರದ ಉದ್ದೇಶವಾಗಿರುತ್ತ, ಈ ಕೈಗಾರಿಕೆಗಳಿಗೆ ಹಣ ಒದಗಿಸಲು ಒಂದು ಪ್ರಾಂತಿಕ ಅರ್ಥಸಾಧಕ ಸಂಸ್ಥೆಯ ಸ್ಥಾಪನೆಯ ಕುರಿತೂ ಈ ಮಂತ್ರಿಗಳು ಪ್ರಸ್ತಾವಿಸಿರುವರಲ್ಲದೆ, ಹಲವಾರು ಸರಕಾರೀ ಶಾಖೆಗಳಿಗೆ ಸಂಬಂಧಿಸಿದ ಉಪಸಮಿತಿಗಳನ್ನೂ ರಚಿಸುವ ಯೋಜನೆ ತಮಗಿದೆಯೆಂದೂ ತಿಳಿಸಿರುವರು.

ಎದ್ಯಾ ಮಂತ್ರಿಗಳಾದ ಶ್ರೀ। ಟಿ. ಎಸ್. ಅವಿನಾಶಲಿಂಗಂ ಚೆಟ್ಟಿಯಾರರು ಈ ಆಧಿಪತ್ಯದ ಶಿಕ್ಷಣ ನೀತಿಯ ಕುರಿತಾಗಿ ಪ್ರಕಟಿಸುತ್ತ, ಯೋಗ್ಯರಾದ ಭಾರತ ರಾಷ್ಟ್ರೀಯ ದಳದವರು ಮುಂದೆ ಬರಲಿ ಎಂದಿದ್ದಾರೆ. ಉಪಾಧ್ಯಾಯರ ಸ್ಥಾನಗಳನ್ನು ಉತ್ತಮಗೊಳಿಸಲಾಗುವುದು; ಅವರ ಸಂಖ್ಯೆಯನ್ನು ಹೆಚ್ಚಿಸಲಾಗುವುದು; ಆಧಿಪತ್ಯದ ಟ್ರೈನಿಂಗ್ ಶಾಲೆಗಳನ್ನು ಪುನರ್ ವ್ಯವಸ್ಥೆಗೊಳಿಸಲಾಗುವುದು ಎಂದಿದ್ದಾರೆ.

ಪ್ರಧಾನರಾದ ಶ್ರೀ। ಟಿ. ಪ್ರಕಾಶಂ ಅವರು ಈ ಆಧಿಪತ್ಯದ ಆಹಾರ ವಿತರಣೆಯ ಕುರಿತು ತಾವು ಅನುಸರಿಸುವ ಉಪಾಯಗಳೇನೆಂದು ಎವರಿಸಿದ್ದಾರೆ. ಇದಕ್ಕಾಗಿ ಅವರೂ ಇತರ ಮಂತ್ರಿಗಳೂ ಕೂಡಲೇ ಅಲ್ಲಲ್ಲಿ ಸಂಚರಿಸಿ ವಿದ್ಯಮಾನಗಳ ಅನುಭವಮಾಡಿಕೊಳ್ಳಲಿದ್ದಾರೆ. ಈ ವಿಚಾರದಲ್ಲಿ ಪ್ರಧಾನರು ಅಭಿಪ್ರಾಯವಿಸ್ತರಃ-ಹೊರಗಿನಿಂದ ಬರುವ ಇಲ್ಲಿ ದಾಸ್ತಾನಿರುವ ಯಾವತ್ತು ಅನ್ನ ಸಾಮಗ್ರಿಗಳನ್ನೂ ಎಲ್ಲರಿಗೂ ಸಮಾನವಾಗಿ ಹಂಚಬೇಕು; ರೇಶ್ನಿಂಗ್ ಪದ್ಧತಿಯನ್ನು ಸಂಪೂರ್ಣಗೊಳಿಸಬೇಕು; ಆಧಿಪತ್ಯದಲ್ಲಿ ಬೆಳೆದುದನ್ನು, ಅದರಲ್ಲಿ ಮಿಗತೆಯನ್ನು ಸರಿಯಾಗಿ ಸಂಗ್ರಹಿಸಬೇಕು; ಬೆಳೆದವರಿಗೆ ನ್ಯಾಯವಿರುವಷ್ಟು ಬಿಡಬೇಕು; ಈ ವಿಷಯದಲ್ಲಿ ದೂರುಗಳಿಗೆ ಅವಕಾಶವಿಲ್ಲದ ಹಾಗೆ ಅಧಿಕಾರಿಗಳಲ್ಲದವರನ್ನೂ ಜತೆಗೂಡಿಸಿಕೊಂಡು, ಸಾಧ್ಯವಿರುವ ಮಟ್ಟಿಗೆ, ಆಹಾರದ ದುಃಸ್ಥಿತಿಯನ್ನು ಎದುರಿಸಬೇಕು; ಪ್ರಾಂತಿಕ ಸರಕಾರಗಳಿಂದ ನಿಯೋಜಿತವಾದ ಪ್ರಾಂತಿಕ, ಜಿಲ್ಲಾ ತಾಲೂಕು ಸಮಿತಿಗಳಲ್ಲಿ ಅಗತ್ಯವಿರುವ ಬದಲಾವಣೆ ಮಾಡಬೇಕು; ಗ್ರಾಮ ಸಮಿತಿಗಳ ಮೂಲಕ ಗ್ರಾಮಸ್ಥರ ಸಹಕಾರವನ್ನೂ ಪಡೆಯಬೇಕು;—ಇದರಲ್ಲಿ ಪ್ರಧಾನರು ಸಾರ್ವಜನಿಕರ ರೈತರ, ವೇಸಾಯಗಾರರ ಸಹಕಾರವನ್ನು ಕೋರಿ, ಸದ್ಯ ಆಹಾರ ಧಾನ್ಯಗಳ ಬೆಲೆ ತಗ್ಗಿಸುವಲ್ಲಿ ನ್ಯಾಯ ತೋರದೆಂದೇ ತಿಳಿಸಿದ್ದಾರೆ.

ಮಂತ್ರಿಗಳ ಈ ಕಾರ್ಯನೀತಿಯಲ್ಲಿ ಅಷ್ಟೊಂದು ಹೊಸ ಬದಲಾವಣೆಗಳೇನೂ ಇಲ್ಲವಾದರೂ, ಮೇಲ್ಕಂಡ ವಿಚಾರದಲ್ಲಿ ಶ್ರದ್ಧೆಯಿಟ್ಟು ಕೆಲಸ ನಡೆಸಿದರೆ, ವಿದ್ಯಾ ಕೈಗಾರಿಕೆಗಳು ವೃದ್ಧಿಗೊಳ್ಳುವಲ್ಲಿ ಸಂದೇಹವಿಲ್ಲ. ಜನತಾ ಸರಕಾರವಾದುದರಿಂದ, ಜನತೆಯ ಅವಶ್ಯಕತೆಗಳಿಗೆ ತಕ್ಕಂತೆ ಆಗಾಗ ಬದಲಾವಣೆಗಳು ಅಗತ್ಯವಾದೀತು. ಅಂಥ ಬದಲಾವಣೆಗಳನ್ನು ಯುಕ್ತ ಕಂಡಂತೆ ಮಾಡಿ, ನಮ್ಮ ಇಂದಿನ ಕಾಂಗ್ರೆಸ್ ಮಂತ್ರಿಮಂಡಲ ಜನತೆಯ ಕೃತಜ್ಞತೆಯನ್ನು ಪಡೆಯದಿರದೆಂದು ಹಾರೈಸುವ. ——

ಸಿಮ್ಲಾ ಕಾನ್ಫರೆನ್ಸಿನ ಪೂರ್ವ ಪೀಠಿಕೆ

ಮೇಲ್ಕಂಡ ಸಮ್ಮೇಳನದ ಪೂರ್ವ ಪೀಠಿಕೆಯಾಗಿ ಪಂಡಿತ ನೆಹರೂಗಳಿಗೂ ವೈಸರಾಯರಿಗೂ; ಸರ್. ಸ್ಟಾ. ಕ್ರಿಪ್ಸರಿಗೂ ಗಾಂಧಿಜಿಯವರಿಗೂ ಭೇಟಿ ಸಂಭಾಷಣೆಗಳು ಕಳೆದ ತಾ. ೨—೩ರಲ್ಲಿ ನಡೆದಿದ್ದುವು. ನಿಯೋಗಗೋಷ್ಠಿಯವರು ಸಿಮ್ಲದಲ್ಲೇ ಈ ಪ್ರಕರಣವನ್ನು ಮುಗಿಸಬೇಕೆಂದು ನಿರ್ಧರಿದ್ದಾರೆ. ಇಲ್ಲಿನ ಸಮ್ಮೇಳನ ೧೦–೧೫ ದಿನಗಳ ವರೆಗೆ ನಡೆಯಬಹುದಾಗಿದೆ.

ಸಿಮ್ಲಾ ಸಮ್ಮೇಳನದ ಕೆಲ ವಿವರಗಳು

ಕಳೆದ ಆದಿತ್ಯವಾರದಿಂದ ಸಿಮ್ಲದ ವೈಸರಾಯ ಮಂದಿರದಲ್ಲಿ ಮೂರು ಪಂಗಡಗಳ ಸಮ್ಮೇಳನಕ್ಕೆ ಅಣಿಯಾಗಿದೆ. ಬ್ರಿಟಿಷ್ ನಿಯೋಗಗೋಷ್ಠಿಯವರೂ ಕಾಂಗ್ರೆಸಿನ ಮುಂದಾಳುಗಳೂ ಎಡೆಬಿಡದೆ ಮಾತುಕತೆಗಳನ್ನು ನಡೆಸಿದ ವಾರ್ತೆಗಳು ಬಂದಿವೆ. ಸಿಮ್ಲದಲ್ಲಿ ಗಾಂಧಿಜಿಯವರ ಶಿಬಿರದಲ್ಲಿ ರಾಜಕುಮಾರಿ ಅಮೃತಕೌರರ ಹೊರತಾಗಿ ಎಲ್ಲಕ್ಕೆ ಪರಿವಾರದವರೆಲ್ಲ ದಿಲ್ಲಿಗೆ ಹಿಂತಿರುಗುವಂತೆ ಏರ್ಪಾಡಾಗಿದೆ.

ಎಂ। ಜಿನ್ನಾ ಸಾಹೇಬರೂ ಅವರೊಡನೆ ಮುಸ್ಲಿಂ ಡೆಲಿಗೇಶನಿನ ನವಾಬ್ಜಾದಾ ಲಿಯಾಖತ್ ಅಲಿಖಾನ್, ನವಾಬ್ ಮೊಹಮ್ಮದ್ ಇಸ್ಮಾಯಲ್ ಮತ್ತು ಎಂ। ಅಬ್ದುಲ್ ರಬ್ಬೀಶ್ಟರ್‌ರೆಂಬ ಇತರ ಮೂವರೂ ಆಗಲೇ ಸಿಮ್ಲಕ್ಕೆ ತಲುಪಿದ್ದಾರೆ.

(೩ನೇ ಪುಟದಿಂದ)

ಹೂದ್ಯರಲ್ಲಿ ಸಹೋದರ ಭಾವವು ತೋರಿ ಬರುವ ತನಕ ಮಹಾರಾಷ್ಟ್ರಗಳೇ ಪೆಲೆಸ್ಟಿನಿನ ಆಡಳಿತೆಯನ್ನು ನಡೆಸುತ್ತಿರಬೇಕೆಂದು ಸಮಿತಿಯವರು ಪಟ್ಟ ಅಭಿಪ್ರಾಯದಿಂದ ಪೆಲೆಸ್ಟಿನಿನಲ್ಲಿರುವ ಅರಬರ ಗೊಂದಲವು ಹೆಚ್ಚದಿರದು; ಅರಬ ರಾಷ್ಟ್ರಗಳೆಲ್ಲಾ ಆಂಗ್ಲ ಅಮೇರಿಕೆಗಳ ಮೈತ್ರತ್ವವನ್ನು ಬಿಟ್ಟು ಸೋವಿಯಟ ರಶ್ಯದ ಕಡೆ ತಮ್ಮ ದೃಷ್ಟಿಯನ್ನು ತಿರುಗಿಸಬಹುದು. ಮಧ್ಯ ಸಮುದ್ರದಲ್ಲಿ ತನಗೆ ಪ್ರವೇಶವಿರಬೇಕೆಂದು ಸಾಧಿಸುತ್ತಿರುವ ರಶ್ಯದ ಧೋರಣೆಗ ಪೆಲೆಸ್ಟಿನಿನ ಘಟನೆಗಳಿಂದ ಬಲವೊದಗಿ ಆಂಗ್ಲ ಸಾಮ್ರಾಜ್ಯಕ್ಕೆ ನೂತನ ಕಷ್ಟಗಳೇಳಬಹುದು. ಆಂಗ್ಲ ಅಮೇರಿಕಗಳಿಗೂ ರಶ್ಯಕ್ಕೂ ತಿಕ್ಕಾಟಗಳು ದಿನೇ ದಿನೇ ವೃದ್ಧಿಯಾಗುವಂತಿವೆ. ನಿಜವಾದ ಶಾಂತಿಸ್ಥಾಪನೆಯು ಇನ್ನೂ ದೂರವಿದೆಯೆಂದು ತೋರುತ್ತದೆ.

ತಮ್ಮ ದುರಾಶೆಗಳಿಂದ ಎರಡು ಮಹಾ ಯುದ್ಧಗಳಲ್ಲಿ ಸಿಲುಕಿ ಕಂಗೆಟ್ಟರೂ ಬಿಳೀ ಜನರಿಗಿನ್ನೂ ಎಚ್ಚಾರಗಳು ಬಂದಿರುವವೆಂದು ಹೇಳ ಸಾಧ್ಯವಿಲ್ಲ. ಆಸ್ಯದಲ್ಲಿ ಯುರೋಪಿನ ಬಿಳೀ ಜನರ ಒಡೆತನವು ಜೇಗಬೇಗನೇ ಸಮಾಪ್ತಿಯನ್ನು ಸೂಚಿಸುತ್ತಿದೆ. —ಆಫ್ರಿಕವನ್ನಾದರೂ ಬಿಳೀ ಜನರ ಎಲಾ ಸಭೂಮಿಯಾಗಿ ಶಾಶ್ವತ ಇಟ್ಟುಕೊಳ್ಳಬೇಕೆಂದು ಆಫ್ರಿಕದಲ್ಲಿ ಸೇರಿಕೊಂಡ ಆಂಗ್ಲ ಡಚ್ಚರ ಆಶೆಯಾಗಿದೆ. ದಕ್ಷಿಣ ಆಫ್ರಿಕದಲ್ಲಿ ನಾಲ್ಕು ರಾಷ್ಟ್ರಗಳಿವೆ. ಟ್ರಾನ್ಸ್‌ವಾಲ್ ಒರೆಂಜ್ ಫ್ರೀಸ್ಟೇಟುಗಳಲ್ಲಿ ಡಚ್ಚ ರಕ್ತಕ್ಕೆ ಸೇರಿದ ಬೂವರ್ ಜನರೂ ಕೇಪ್ ಮತ್ತ ನೇಟಾಲುಗಳಲ್ಲಿ ಆಂಗ್ಲೇಯರೂ ಪ್ರಬಲರಾಗಿದ್ದಾರೆ. ನಾಲ್ಕು ರಾಷ್ಟ್ರಗಳೂ ಕೂಡಿ ದಕ್ಷಿಣ ಆಫ್ರಿಕದ ಯೂನಿಯನ್ ಎಂಬ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ಸಂಸ್ಥಾನವಾಗಿಯದೆ. ಈ ಸಂಸ್ಥಾನದ ಸುಮಾರು ೧೦೦ ಲಕ್ಷ ಜನರಲ್ಲಿ ೭೦ ಲಕ್ಷ ದೇಶೀಯ ಕಪ್ಪು ಜನರೂ ೨೦ ಲಕ್ಷ ಯುರೋಪಿನ ಬಿಳೀ ಜನರೂ ೨೫ ಲಕ್ಷ ಹಿಂದೀಯರೂ,ಉಳಿದವರು ಚೀನೀ ವಗೈರೆನಾನಾ ದೇಶಗಳ ಕಪ್ಪು ಜನರೂ ಆಗಿದ್ದಾರೆ. ರಾಜ್ಯಾಧಿಕಾರವೆಲ್ಲಾ ೨೦ ಲಕ್ಷ ಯುರೋಪಿಯನ್ ಬಿಳೀ ಜನರ ಕೈಯಲ್ಲಿದ್ದು ಉಳಿದವರಿಗೆ ರಾಜ್ಯಾಧಿಕಾರದಲ್ಲಿ ಭಾಗವಾಗಲಿ, ರಾಷ್ಟ್ರದ ಸಂಪತ್ತಿನ ಪ್ರಯೋಜನವಾಗಲಿ ಲವಷ್ಟಾದರೂ ದೊರಕುವುದಿಲ್ಲ. ದೇಶೀಯ ಕಪ್ಪು ಜನರು ವಿದ್ಯಾರಹಿತರಾಗಿ, ಕೇಳುವವರ್ಯಾರೂ ಇಲ್ಲದೆ ಬಿಳೀ ಜನರ ಸೇವೆಯಲ್ಲಿ ಬಿದ್ದುಕೊಂಡಿರುವುದರಿಂದ ಆ ಬಿಳೀ ಜನರಿಗೆ ಅವರಿಂದೇನೂ ತೊಂದರೆಗಳು ಒದಗುವಂತಿಲ್ಲ. ಚೀನೀಯರೂ ಇತರರೂ ತಮ್ಮುಹಕ್ಕು ತಮ್ಮುಸ್ಥಿತಿಗತಿಗಳ ಕಡೆ ತೀರಾ ಉದಾಸೀನತೆಯಲ್ಲಿದ್ದಾರೆ. ಆದರೆ ೨೫ ಲಕ್ಷ ಹಿಂದೀಯರು ಎಚ್ಚಾರ, ಸ್ವಾಭಿಮಾನಗಳಿಂದ ತುಂಬಿದವರಾದುದರಿಂದ ಬಿಳೀ ಜನರ ಸ್ವಾರ್ಥತೆಯ ದುರಾಲೋಚನೆಗಳನ್ನು ಬಲವಾಗಿ ಪ್ರತಿಭಟಿಸುತ್ತಿದ್ದಾರೆ. ಹಿಂದೀಯರಲ್ಲಿ ಹೆಚ್ಚಿನವರು ನೇಟಾಲಿನಲ್ಲಿ ವಾಸಿಸಿಕೊಂಡು ಬರುತ್ತಾರೆ. ಅಲ್ಲಿ ಕೃಷಿ, ರಾಜಕೀಯ ಉದ್ಯೋಗಗಳಲ್ಲೇನೂ ಹಿಂದೀಯರಿಗೆ ಭಾಗ ದೊರಕದಿದ್ದರೂ ವಾಣಿಜ್ಯ, ವಹಿವಾಟುಗಳಲ್ಲಿ ಹಿಂದೀಯರು ಜಾಣರಾದುದರಿಂದ ಅವರು ಸ್ವರಕ್ಷಣೆಯನ್ನು ಕೈಕೊಳ್ಳುವಷ್ಟು ಯೋಗ್ಯತೆಯನ್ನು ಸಂಪಾದಿಸಿಕೊಂಡು ಬಿಳೀ ಜನರೊಡನೆ ಸರಿಸಮಾನತೆಗಾಗಿ ಹೋರಾಡುತ್ತಿದ್ದಾರೆ. ಸರಕಾರದಿಂದ ಅವರಿಗೇನೂ ಸಹಾಯವಿಲ್ಲ. ತಮ್ಮ ಧೋರಣೆಗಳಿಗೆ ಅವರಿಂದ ಕಂಟಕಗಳೊದಗಬಹುದೆಂದು ಬಿಳೀ ಜನರು ಅವರನ್ನು ದ್ವೇಷಿಸುತ್ತಾರೆ. ವಾಣಿಜ್ಯ, ವ್ಯಾಪಾರಗಳಲ್ಲಿ ಹಿಂದೀಯರೊಡನೆ ಸಮಶರ್ತಗಳೊಳಗಾಗಿ ಸ್ಪರ್ಧಿಸುವ ಶಕ್ತಿ ಇಲ್ಲದ—ಕಾಯ್ದು ಕಷ್ಟಗಳನ್ನು ಹಿಂದೀಯರಂತೆ ಮಾಡಲು ಸಮರ್ಥರಾಗದ ಆ ಬಿಳೀ ಜನರು ಹಿಂದೀಯರನ್ನು ತಗ್ಗಿಸಿ, ತುಚ್ಛೀಕರಿಸುವ ಉದ್ದಿಶ್ಯದಿಂದ ರಾಷ್ಟ್ರಾಧಿಕಾರಗಳನ್ನೆಲ್ಲಾ ದುರುಪಯೋಗ ಮಾಡುತ್ತಾ ಬರುತ್ತಾರೆ. ದಕ್ಷಿಣ ಆಫ್ರಿಕ ಯೂನಿಯನಿಗೆ ಸೇರಿದ ಎಸ್ಟೀರ್ಣದಲ್ಲಿ ೧೩ರಲ್ಲಿ ೧೨ ಅಂಶದಷ್ಟು ಪ್ರದೇಶವನ್ನು ಪ್ರತ್ಯೇಕಿಸಿಟ್ಟು— ಉಳಿದ ೧ ಅಂಶದಲ್ಲಿ ಮಾತ್ರ ಹಿಂದೀಯರೂ ಇತರ ಕಪ್ಪು ಜನರೂ ವಾಸ್ತವಿಸಿಕೊಂಡು ಬರಬೇಕಾಗಿ ದಕ್ಷಿಣ ಆಫ್ರಿಕದ ಬಿಳೀ ಜನರ ಸಾಧನೆಯಾಗಿದೆ. ಆ ೧೩ರಲ್ಲಿ ಒಂದು ಅಂಶವು ಕೃಷಿಗೆ ಅಯೋಗ್ಯವಾದ, ಆರೋಗ್ಯಕ್ಕೆ ಹಾನಿಕರವಾದ ಪ್ರದೇಶಗಳಿಂದಲೇ ತುಂಬಿಕೊಂಡಿದೆ. ಬಿಳೀ ಜನರ ಸೇವೆಗಾಗಿ ಬಿಳೀ ಜನರು ಕರೆಯಬಹುದಾದ ಕಪ್ಪು ಜನರು ಮಾತ್ರ ಉಳಿದ ೧೨ ಅಂಶದ ಸ್ಥಳಗಳಲ್ಲಿರಬಹುದಲ್ಲದೆ ಅಲ್ಲಿ ಸಾಮಾನ್ಯ ಕಪ್ಪು ಜನರು ವಾಸಿಸಿಕೊಂಡಿರಲಿಕ್ಕಾಗಲಿ ವ್ಯಾಪಾರ ವಹಿವಾಟುಗಳನ್ನು ನಡೆಸಲಿಕ್ಕಾಗಲಿ ನಿರ್ಬಂಧವಿದೆ.

ಇತ್ತೀಚೆ ಯುದ್ಧದ ನಡುವೆ ಹಲವು ಹಿಂದೀಯರು ಹೇರಳ ಐಶ್ವರ್ಯವನ್ನು ಗಳಿಸಿ, ತಾವು ವಾಸ್ತವಿಸಿಕೊಂಡಿರದಿದ್ದರೂ ಚಿಂತೆಯಿಲ್ಲ; ತಮಗೆ ಆಸ್ತಿಯ ಹಕ್ಕಿದ್ದರೆ ಸಾಕೆಂದು ಆ ೧೨ ಅಂಶದ ಭಾಗದಲ್ಲಿ ಅಲ್ಲಲ್ಲಿ ಸ್ಥಳಗಳನ್ನು ಕ್ರಯಕ್ಕೆ ಪಡಕೊಳ್ಳತೊಡಗಿದ್ದರಿಂದ ಬಿಳೀ ಜನರ ಮತ್ಸರ, ದ್ವೇಷಗಳು ಪುನಃ ಪ್ರಬಲವಾಗಿ ಇದೇ ೧೭ನೇ ಎಪ್ರಿಲಿನಲ್ಲಿ ಫೆಟ್ಟೋಬಿಲ್ ಒಂದನ್ನು ದ ಆಫ್ರಿಕದ ಯೂನಿಯನ್ ಪಾರ್ಲಿಮೆಂಟಿನವರು ಶಾಸನರೂಪಕ್ಕೆ ತಂದಿರುವರು. ಈ ಶಾಸನದ ಫಲವಾಗಿ ಇನ್ನು ಹಿಂದೀಯರು ಬಿಳೀ ಜನರು ತಮಗಾಗಿ ಟ್ಟುಕೊಂಡ ೧೩ರಲ್ಲಿ ೧೨ ಅಂಶದ ಪ್ರದೇಶದಲ್ಲಿ ಪ್ರವೇಶಿಸುವುದಾಗಲಿ ಅಲ್ಲಿ ಸ್ಥಳಗಳನ್ನು ಪಡೆಯುವುದಾಗಲಿ ಸಾಧ್ಯವಿಲ್ಲ. ಕಪ್ಪು ಜನರ ಕೇರಿಗಳಲ್ಲಿಯೇ ಹುಟ್ಟಿ ಬೆಳೆದು ತಮ್ಮ ವ್ಯವಹಾರಗಳನ್ನು ಅಲ್ಲಿಯೇ ನಡೆಸಿ, ಅಲ್ಲಿಯೇ ಸಾಯಬೇಕಾಗಿದೆ.

ಅಲ್ಲಿಯ ಹಿಂದೀಯರು ೧೯೬೦ರಿಂದ ದಕ್ಷಿಣ ಆಫ್ರಿಕದಲ್ಲಿ ವಾಸಿಸಿಕೊಂಡು ಬಂದವರು. ಈ ಹೊತ್ತು ನಿನ್ನೆ ಅಲ್ಲಿ ಸೇರಿದವರಲ್ಲ ತಾವು ಪ್ರಾಚೀನ ನಾಗರೀಕತೆಯು ಬೀಡಾದ ಈ ಭಾರತಮಾತೆಯ ಮಕ್ಕಳೆಂದು ಅವರಲ್ಲಿ ಸ್ವಾಭಿಮಾನ ಗೌರವಗಳು ತುಂಬಿವೆ ಅವರು ಬಿಳೀ ಜನರ ದರ್ಪಕ್ಕೆ ಬಗ್ಗುವಂತಿಲ್ಲ. ಹಿಂದೀಯರಲ್ಲಿ ಅವರ ಕಡೆ ಸಹಾನುಭೂತಿ ಇದೆ. ಅವರಿಗೆ ಈಗ ಸಹಾಯ ಮಾಡುವ ಶಕ್ತಿ ಇಲ್ಲ. ಹಿಂದೀ ಸ್ವಾತಂತ್ರ್ಯವು ದೊರಕಿ, ಹಿಂದುಸ್ಥಾನವು ಬಲಿಷ್ಠ ರಾಷ್ಟ್ರವಾದರೆ, ದಕ್ಷಿಣ ಆಫ್ರಿಕದ ಬಿಳೀ ಜನರ ಕೈಯಿಂದ ಅಲ್ಲಿರುವ ಭಾರತೀಯರ ಮಕ್ಕಳನ್ನು ರಕ್ಷಿಸುವ ಕಾರ್ಯವನ್ನು ಹಿಂದೀಯರು ಕೈಕೊಳ್ಳಬಹುದಿರರು. ಸಿವ್ವದಲ್ಲೀಗ ಭಾರತದ ಭವಿಷ್ಯ ಮಾತ್ರವಲ್ಲ—ಜಗತ್ತಿನ ಮೂಲೆ ಮೂಲೆಗಳಿಗೂ ಸೇರಿಕೊಂಡಿರುವ ಭಾರತೀಯರ ಭಾಗ್ಯವೂ ನಿಶ್ಚಯವಾಗುತ್ತಿದೆ. "V"

1945 A YEAR OF ALL ROUND PROGRESS

Completed New Business over		Rs.	20,30,000
Premiums, Interest &c.	,,	Rs.	3,05,000
Govt. & Trust Securities	,,	Rs.	4,25,000
Life Assurance Fund	,,	Rs.	6,30,000
Total Assets	,,	Rs.	7,50,000

Very low Expense Ratio

Reviewing the progress of the Company in 1945 Mr. D. Sesha Iyer, M. A., F. I. A., Actuary, writes:

"If the same policy as you have now been following, is continued in future, I am sure the Company would be able to put up a good record at the next valuation."

A decisive Organisation Programme is now on Hand.

APPLICATIONS FOR SALARIED APPOINTMENT OF **Organisers** and for **Chief & Special Agencies** on commission basis are invited.

The Popular Insurance Company, Limited.

MANGALORE.

Reserve Bank of India,
CENTRAL OFFICE,
BOMBAY.
25th April, 1946.

NOTICE

It is hereby notified that the Share Registers of the Bank will be closed and the registration of transfers suspended from the 7th June 1946 to the 29th June 1946 (both days inclusive.)

C. D. DESHMUKH.
Governor.

ಮಂಗಳೂರು

ಹರತಾಳ

ಈ ದಿನ ದಿವಂಗತ ಭುಲ್ಲಾಭಾಯ್ ದೇಸಾಯಿಗಳ ಗೌರವಾರ್ಥವಾಗಿ ಮಂಗಳೂರಲ್ಲಿ ಹರತಾಳದ ಏರ್ಪಾಡಿದೆ.

ಜಿಲ್ಲಾ ಅನ್ನ ಸಮಿತಿಯ ಮೀಟಿಂಗ್

ಈ ಮೀಟಿಂಗ್ ಕಳೆದ ತಾ। ೨೯ರಲ್ಲಿ ಜಿ॥ ಕಲೆಕ್ಟರರ ಕಚೇರಿಯಲ್ಲಿ ಅವರ ನೇತೃತ್ವದಲ್ಲಿ ಜರುಗಿತು. ಕಲೆಕ್ಟರರು ಕಳೆದ ಮೀಟಿಂಗಿನಿಂದ ಈಚೆಗೆ ೮೧೪೨ ಟನ್ ಅಕ್ಕಿ ಸಂಗ್ರಹವಾಗಿದೆ; ಇನ್ನು ೨ ಸಾವಿರ ಟನ್ ಅಕ್ಕಿ ಸಂಗ್ರಹವಾಗಬಹುದು. ಎಂದರು.

ಗ್ರಾಮಾಂತರಗಳಲ್ಲಿ ಅಕ್ಕಿ ಕೊಟ್ಟು ಗೋಧಿ ಪಡೆಯಲು ಡಿಪೋಗಳಲ್ಲಿ ಏರ್ಪಾಡಾಗಿದೆ; ಕಾರ್ಕಳ, ಪುತ್ತೂರು ಕುಂದಾಪುರ ತಾಲೂಕುಗಳ ಘಟ್ಟದ ಬುಡದ ಗ್ರಾಮಗಳು ಇದೇ ಮೇ ೧೫ರೊಳಗೆ ಎರಡನೇ ಬೆಳೆ ಅಕ್ಕಿ ಒಪ್ಪಿಸಿದರೆ ಸಾಕೆಂದು ನಿರ್ಧರಿಸಲಾಗಿದೆ.

ಗೆಣಸಿನ ವಿಚಾರದಲ್ಲಿರುವ ನಿರ್ಬಂಧಗಳು ಈಗಿರುವಂತಿಲ್ಲ; ಆ ನಿರ್ಬಂಧಗಳನ್ನು ಬಿಗಿಯಾಗಿ ಜಾರಿಗೆ ತರಬೇಕು. ಗಣಸನ್ನು ಹೂರುಮಾಡಿ ಒಣಗಿಸಿಡುವುದು ಅಗತ್ಯವಲ್ಲ; ದ್ವಿದಳ ಧಾನ್ಯವನ್ನು ಜಾನುವಾರುಗಳಿಗೆ ತಕ್ಕಷ್ಟು ಬಿಟ್ಟ ಮೇಲೆ ಮಾತ್ರ ಉಳಿದುದ್ದನ್ನು ಸಂಗ್ರಹಿಸಬೇಕು ಎಂದು ಅಭಿಪ್ರಾಯ ಪಡಲಾಯಿತು.

ತೆಂಗಿನ ಕಾಯಿಗಳಿಂದಾಗುವ ವಸ್ತುಗಳ ಬೆಲೆ ಮಿತಪಡಿಸುವಹಾಗೆ ಸರಕಾರಕ್ಕೆ ಎನಂತಿಸಿಕೊಳ್ಳಬೇಕೆಂದಾಯಿತು. ನರಿಗಳ ಕಾಟವನ್ನು ಅಡಗಿಸಲು ಉಪಾಯಗಳನ್ನು ಕೈಕೊಳ್ಳುವ ನಿರ್ಧಾರವಾಯಿತು.

ಪ್ರಚಾರಕಾರ್ಯದ ವ್ಯಾಪಿನವರು ಮುಸುಕಿನ ಜೋಳದ ಕುರಿತು ಮಾಹಿತಿ ಕೊಡುವಂತೆ ಏರ್ಪಾಡು ನಡೆಯಬೇಕೆಂದೂ ಮೈಸೂರು ಕಡೆಯಿಂದ ಜಾನುವಾರುಗಳನ್ನು ತರಿಸುವಂತೆ ಆ ಸರಕಾರದೊಡನೆ ವ್ಯವಹಾರ ನಡೆಸಬೇಕೆಂದೂ ಸೂಚಿಸಲಾಯಿತು. ರೇಶನ್ ಕ್ಷೇತ್ರದವರು ಅಲ್ಲಿಂದ ಹೊರಗೆ ಹೋಗುವಾಗ, ಆ ಕ್ಷೇತ್ರದ ಹೊರಗಿನವರು ಆ ಕ್ಷೇತ್ರಕ್ಕೆ ಬರುವಾಗ ರೇಶನ್ ಸಂಬಂಧವಾದ ನಾನಾ "ಫಜೀತಿ"ಗಳ ನಿವಾರಣೆಯಾಗಿ ಜಿಲ್ಲಾ ಸರಬರಾಯಿ ಆಫೀಸರರು ಈ ವಿಷಯದಲ್ಲಿ ವರದಿ ಮಾಡಬೇಕೆಂದಾಯಿತು.

ಇನ್ನೊಂದು ಮೀಟಿಂಗ್

ಕಳೆದ ತಾ. ೨೯ರಲ್ಲಿ ಕಲೆಕ್ಟರರ ಕಚೇರಿಯಲ್ಲಿ, ಸರಕಾರದ ಅಪ್ಪಣೆಯಂತೆ, ಜಿಲ್ಲಾ ಅನ್ನ ಸಮಿತಿ, ತಾಲೂಕು ಸಮಿತಿಗಳ ಮೆಂಬರರೂ ಜಿಲ್ಲೆಯ ಮತ್ತು ಮಂಗಳೂರಿನ ಕೆಲವು ಮಂದಿ ಖಾಸಗಿ ದೊಡ್ಡ ಮನುಷ್ಯರೂ ಸೇರಿದ್ದ ಒಂದು ಮೀಟಿಂಗ್ ನಡೆಯಿತೆಂದು ಈಚೆಗೆ ತಿಳಿದು ಬಂದಿದೆ. ಅದರಲ್ಲಿ ನಡೆದ ವಿಚಾರಗಳೂ ಇಷ್ಟೆಂದು ಹೇಳಲಾಗಿದೆ:—

ಕಲೆಕ್ಟರರು ಈ ಜಿಲ್ಲೆಯ ಆಹಾರ ಪರಿಸ್ಥಿತಿಯ ಸಾಮಾನ್ಯ ಪರಿಚಯ ಮಾಡಿಸಿಕೊಡುವಾಗ, ಅಶಾಸ್ತ್ರೀಯ ರೇಶ್ನಿಂಗ್, ಪ್ರೊಕ್ಯೂರ್‌ಮೆಂಟ್, ಆಹಾರ ಸಾಧನಗಳನ್ನು ಹೆಚ್ಚಾಗಿ ಬೆಳೆಸುವ ಆಂದೋಲನದ ಸಂಬಂಧ ಕೈಕೊಂಡ ಕಾರ್ಯಕ್ರಮ ಇವೇ ಮೊದಲಾದುವುಗಳ ಕುರಿತು ವಿವರಿಸಿ ಅಕ್ಕಿಗೆ ಬದಲಾದ ಇತರ ಆಹಾರ ಧಾನ್ಯಗಳನ್ನು ಜನರು ಉಪಯೋಗಿಸುವಂತೆ ಮುಂದಾಳುಗಳು ಪ್ರೋತ್ಸಾಹಿಸಬೇಕೆಂದು ತಿಳಿಸಿದರು. ಜನತೆಯ ಸಹಕಾರವನ್ನೂ ಕೋರಿದರು.

ಗ್ರಾಮ ಆಹಾರ ಸಮಿತಿಗಳು ಏರ್ಪಡಬೇಕು; ಅವು ಸರಬರಾಯಿ ಆಫೀಸರರೊಡನೆ ಸಹಕರಿಸಿ ಜನರಿಗೆ ಸರಕಾರದ ಆಹಾರ ನೀತಿಯನ್ನು ವಿವರಿಸಬೇಕು; ಅಕ್ಕಿಯ ಬದಲಿಗೆ ಮುಸುಕಿನ ಜೋಳವನ್ನು ಉಪಯೋಗಿಸಲು ಯತ್ನಿಸಬೇಕು; ತೆಂಗಿನ ಕಾಯ ವಸ್ತುಗಳ ಬೆಲೆ ಇಳಿಸುವಂತೆ ಸರಕಾರದವರನ್ನು ಕೇಳಬೇಕು; ಕಲೆಕ್ಟರರು ಪತ್ರಿಕೋದ್ಯಮಿಗಳ ಎಂಟಂಗ್ ಮಾಡಿ ಅವರಿಗೆ ಆಹಾರ ಸಂಬಂಧದ ಸರಿಯಾದ ವಿದ್ಯಮಾನಗಳನ್ನು ಅರುಹಬೇಕು; ತಾಸರಗೋಡು ತಾಲೂಕಿನಲ್ಲಿ ಉಚಿತವಾಗಿ ಗೊಬ್ಬರ ಹಂಡುವ ಈ ಯೋಜನೆಯ ಸಹಾಯಕ್ಕಾಗಿ ಹಳ್ಳಿಗಳ ನಾನ್ ಆಫಿಶಿಯಲ್ ಮಂದಿಯನ್ನೂ ಕೂಡಿಸಿಕೊಳ್ಳಬೇಕು; ಕೆರೆಗಳ ನೀರಾವರಿ ಕಾಲಿವೆಗಳ ಸಂಬಂಧದ ದುರಸ್ತಿ ಕೆಲಸಗಳನ್ನು ಕೈಕೊಳ್ಳಬೇಕು; ಹಳ್ಳಿಗಳಲ್ಲಿ ಕೆಲವು ರೈತರಲ್ಲಿ ತಿನ್ನುವುದಕ್ಕೇನೂ ಇಲ್ಲದೆ ರೇಶನ್ ಕಾರ್ಡುಗಳೇ ಪ್ರಾಪ್ತಿಯಾದ ಮೂಲಕ ಹಳ್ಳಿಯ ಜನ ಪೇಟೆಗೋಡದಂತೆ ನೋಡಿಕೊಳ್ಳಬೇಕು; ಹೆಚ್ಚು ಜಾನುವಾರುಗಳನ್ನೂ ಕೃಷಿಗೆ ಬೇಕಾದ ಎತ್ತೆ ಯಂತ್ರ ಇತ್ಯಾದಿಗಳನ್ನೂ ಒದಗಿಸಬೇಕು; ಇನ್ನೂ ಈ ಜಿಲ್ಲೆಯಿಂದ ಮಲಬಾರಿಗೆ ಅಕ್ಕಿ ಸಾಗದಂತೆ(ಮುಂದಿನ ಬೆಳೆಯ ವರೆಗೆ ನಮ್ಮಲ್ಲಿ ಅಕ್ಕಿ ದಾಸ್ತಾನು ಸಾಲದ ಕಾರಣ) ಪ್ರಯತ್ನಗಳು ನಡೆಯಬೇಕು.

ವರ್ಗಾವಣೆ

ನಮ್ಮ ಜಿಲ್ಲಾ ಕಲೆಕ್ಟರರಾದ ಶ್ರೀ। ಕೆ. ರಾಮವರ್ಮ ರಾಜ ಅವರು ತಿರುಚಿನಾಪಳ್ಳಿಯ ಜಿಲ್ಲಾ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟು ನಮ್ಮ ಕಲೆಕ್ಟರರಾಗಿ ಶ್ರೀ। ಭೂತಲಿಂಗಮ್ ಅವರು ಇದೇ ತಾ. ೧೫ರೊಳಗೆ ಬರಲಿರುವರೆಂದು ತಿಳಿದುಬಂದಿದೆ.

ರಾಷ್ಟ್ರಸೇವಾ ದಳದ ಶಿಕ್ಷಣ ಶಿಬಿರ

ಈ ಮುಕ್ತಾಯ ಸಮಾರಂಭವು ಕಳೆದ ಆದಿತ್ಯವಾರ ಸಂಜೆ ಕೆನರಾ ಹೈಸ್ಕೂಲಿನ ವಠಾರದಲ್ಲಿ ಡಾ। ಮೌ. ಎಫ್. ಎಚ್. ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಎಮ್. ಫ್ರಾನ್ಸಿಸ್ ಫೆರ್ನಾಂಡೀಸ್ ಕಾರವಾರ್ ಅವರು ವರದಿಯೋದಿದರು. ಸೇವಾದಳದ ಕವಾಯತು ನಡೆಯಿತು. ಎಮ। ಫ್ರಾ. ಫೆರ್ನಾಂಡೀಸರು ಈ ವಿಷಯದಲ್ಲಿ ಮಾತಾಡಿದರು. ಅಧ್ಯಕ್ಷ ಭಾಷಣಾದಿಗಳೂ ಆಯಿತು. ಅಂದು ಅಧ್ಯಕ್ಷತೆ ವಹಿಸುವರೆಂದಿದ್ದ ಶ್ರೀ। ಯು. ಶ್ರೀನಿವಾಸ ಮಲ್ಯರಿಂದ ಬಂದಿದ್ದ ಸಂದೇಶವನ್ನು ಸಭೆಯ ಮುಂದಿ ಓದಲಾಯಿತು.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಯಾ ಇನ್ನಾವ ಕಾರಣವಿದ್ದರೂ — 'ಕುಮಾರಿ' (Govt. Regd.) ನಿಶ್ಚಿತ ನಿರುಪದ್ರವಿ. ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಘಂಟೆಗಳಲ್ಲಿ ಹರಿಯುವುದು. ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ!! ಬೆಲೆ ರೂ. 3/-. ದೀರ್ಘಕಾಲದ ಮತ್ತು ಕಠಿಣತರ ಸಂದರ್ಭಗಳಿಗೆ ವಿಶೇಷ ತಯಾರಿ. ರೂ. 5/-. ಪ್ರತಿ 6 ತಿಂಗಳ ಸಂತತಿ ಪ್ರತಿಬಂಧಕಕ್ಕೆ ರೂ. 4/-. (ವಿ. ಪಿ. 12 ಆಣೆ ಹೆಚ್ಚಿಗೆ.) Mrs. P. Devee F. D. S. (K)
Tollygunge, Calcutta.
ಸ್ವಾಕಿಸ್ಟರು:-ಪೈ ಕಂಪೆನಿ, ಮಂಗಳೂರು.

Wanted

One Secondary Grade Trained Teacher and one Sanskrit Shiromani or Entrance Certificate holder for the Sri Srinivasa Patashala, Mangalore.

Further Particulars about the appointments can be had from the undersigned or the Head-Master of the Patashala. Applications should reach the undersigned by the 31st of May 1946.

G. UPENDRA PRABHU,
Hon. Manager.

Sri Srinivasa Patashala,
Mangalore, 30—4—1946.

Phone No. 95] ಜಯಾ ಕೆಫೆ [ಫೋನು ನಂಬ್ರ ೯೫
(ರಿಜಿಸ್ಟರ್ಡ್)

ಬ್ರಾಹ್ಮಣರ ಶ್ರೇಷ್ಠ ತರಗತಿಯ

ಬೋರ್ಡಿಂಗ್—ಲಾಜಿಂಗ್

ಹಂಪನಕಟ್ಟೆ, ಮಂಗಳೂರು.

ಶುದ್ಧ ತುಪ್ಪದ ರುಚಿಶುಚಿಯ ಬಗೆಬಗೆಯ
ಸಿಹಿ ತಿಂಡಿ ಸರ್ವದಾ ಸಿದ್ಧವಿದೆ.

ನಮ್ಮ ಕೊಟಡಿಗಳು

ಆಧುನಿಕ ಸರ್ವಾನುಕೂಲತೆಗಳಿಂದ ಸುಸಜ್ಜಿತವಾಗಿವೆ.

ಸಂದರ್ಶಕರ ಸೇವೆ, ಮೇಲ್ವಿಚಾರ, ಅವರತೃಪ್ತಿಗಳೇ ಸಂಸ್ಥೆಯ ಪ್ರಾಮುಖ್ಯ ಧ್ಯೇಯ

ಹೆಡ್ ಆಫೀಸ್:
ಕೊಯಮುತ್ತೂರು.

ಎನ್. ವಿ. ಭಟ್,
ಪ್ರೊಪ್ರೈಟರ್.

ಅವನು ಪಾಠಶಾಲೆಗೆ ಹೋಗಿದ್ದಾನೆ. ಅಲ್ಲಿಂದ ಅವನು ಹಿಂದಕ್ಕೆ ತರುವುದಾದರೂ ಏನು? ಹೊಸ ಜ್ಞಾನ, ಹೊಸನಡತೆ,—ಪ್ರಾಯಶಃ ಅಂಟುರೋಗದ ಕ್ರಿಮಿಗಳು! ತಾಯಿಯು ತನ್ನ ಚಿಕ್ಕ ಮಗನಿಗೆ ದೇಹರಕ್ಷಣೆಯ ವಿಷಯಗಳನ್ನೆಲ್ಲಾ ತಿಳಿಸಿ ಕಳುಹಿಸುತ್ತಾಳೆ—ಎಲ್ಲಕ್ಕೂ ಮೇಲಾಗಿ, ಅತ್ಯಂತ ಆರೋಗ್ಯವಾದ ಹುಡುಗನಿಗೂ ಕೂಡ ಕೊಳೆಯಿಂದ ಬರಬಹುದಾದ ಕ್ರಿಮಿಗಳ ಮತ್ತು ರೋಗಗಳ ಅಪಾಯದಿಂದ ತಪ್ಪಿಸಲು ಪ್ರತಿ ದಿನವೂ ಲೈಫ್‌ಬಾಯ್ ಸಾಬೂನನ್ನು ಉಪಯೋಗಿಸುವುದನ್ನೂ ಕಲಿಸಿದ್ದಾಳೆ.

ಲೈಫ್‌ಬಾಯ್ ಒಳ್ಳೆಯ ಸೋಪಿಗಿಂತ ಹೆಚ್ಚು
— ಅದೊಂದು ಒಳ್ಳೆಯ ಅಭ್ಯಾಸ

L. 78-50 KN

LEVER BROTHERS (INDIA) LIMITED

ಪ್ಯಾಲೆಸ್ತೈನಿನ ವಿದ್ಯಮಾನಗಳು

ಪ್ರಧಾನ ಮಿ. ಅಟಲಿಯವರ ಭಾಷಣ

ಬ್ರಿಟಿಶ್ ಪ್ರಧಾನರಾದ ಅಟಲಿಯವರು ಕಾಮನ್ಸ್ ಸಭಾ ಮಂದಿರದಲ್ಲಿ–ಪ್ಯಾಲಸ್ತೈನಿನ ವಿಚಾರದಲ್ಲಿ ನಿಯೋಜಿತವಾಗಿದ್ದ ಅಂಗ್ಲೋ ಅಮೆರಿಕನ್ ಕಮಿಟಿಯವರು ಬರೆದೊಪ್ಪಿಸಿದ ಆ ವರದಿಯನ್ನು ಜಾರಿಗೆ ತರುವ ಕುರಿತಾಗಿ ಭಾಷಣ ಮಾಡಿದರು.

ಮಿ. ಅಟಲಿಯವರು ಈ ವರದಿಯನ್ನು ಬರೆಯುವಲ್ಲಿ ಶ್ರಮವಹಿಸಿದವರನ್ನು ಕೊಂಡಾಡಿ, ಈ ವರದಿ ಕಳೆದ ವಾರದಲ್ಲಿಯೇ ತಮ್ಮ ಕೈಗೆ ಬಂತೆಂದರು. ವರದಿಯು, ಈ ಸಮಿತಿಯನ್ನು ನಿಯೋಜಿಸಿದ ಬ್ರಿಟಿಶ್ ಮತ್ತು ಅಮೆರಿಕ ಸರಕಾರಗಳೆರಡಕ್ಕೂ ಕಳುಹಿಸಲ್ಪಟ್ಟಿದೆ; ಈ ವರದಿಯನ್ನು ಈಗ ಬ್ರಿಟಿಶ್ ಸರಕಾರವು ಅವಲೋಕಿಸುತ್ತಿದ್ದು ಮುಂದೆ ಆ ಕುರಿತು ಬೇಗನೆ ಅಮೆರಿಕ ಸರಕಾರದೊಡನೆ ಆಲೋಚಿಸುವುದೆಂದರು.

ವರದಿಯನ್ನು ಸಮಗ್ರವಾಗಿ ಎಮರ್ಶಿಸಬೇಕಾಗಿದೆ; ಅದನ್ನು ಜಾರಿಗೆ ತರುವಲ್ಲಿ ಬಹು ದೊಡ್ಡ ಹೊಣೆಗಾರಿಕೆ ಇದೆ; ಬಹು ಕಾಲ ಅದರಿಂದ ಬದ್ಧವಾಗಿರುವ ಸ್ಥಿತಿಯೂ ಇದೆ ಎಂದರು.

ಬಹು ಕಾಲದ ವರೆಗೆ ಬದ್ಧವಾಗಿರುವ ವಿದ್ಯಮಾನಗಳಲ್ಲಿ ಬ್ರಿಟಿಶ್ ಸರಕಾರವು ತಾನೊಂದೇ ಆಗಿ ವರ್ತಿಸುವುದು ಅದರ ಕಾರ್ಯನೀತಿಯಲ್ಲ; ಈ ಸಂದರ್ಭದಲ್ಲಿ ಹೆಚ್ಚಿನ ಎಲಿಟರಿ ಮತ್ತು ಹಣ ಕಾಸಿನ ವಿಚಾರದಲ್ಲಿ ಎಷ್ಟು ಮಟ್ಟಿನ ಜವಾಬುದಾರಿಯನ್ನು ಅಮೆರಿಕವು ಹೊರಲು ಮುಂದೆ ಬರುತ್ತಿದೆ ಎಂಬುದನ್ನು ಬ್ರಿಟಿಶ್ ಸರಕಾರ ಅಮೆರಿಕ ಸರಕಾರದಿಂದ ತಿಳಿದುಕೊಳ್ಳಲಿದೆ ಎಂದು ಪ್ರಧಾನರು ಸೂಚಿಸಿದರು.

ಪ್ಯಾಲಸ್ತೈನಿನೊಳಗೆ ಯೆಹೂದಿಗಳಿಗೆ ಪ್ರವೇಶ ದೊರಕುವ ಹಾಗೆ ಅವರಿಗೆ ಕೂಡಲೇ ೧೯೪೬ರಲ್ಲಿ ೧ ಲಕ್ಷ ಸರ್ಟಿಫಿಕೇಟುಗಳನ್ನು ದೊರಕಿಸಿ ಕೊಡಬೇಕು; ಅಲ್ಲದೆ ಸಂದರ್ಭಗಳು ಅನುಕೂಲವಾದ ತಕ್ಷಣವೇ ಅವರನ್ನು ಅಲ್ಲಿ ಪ್ರವೇಶಗೊಳಿಸಬೇಕು–ಹೀಗೆಂದು ಆ ವರದಿ ಶಿಫಾರಸು ಮಾಡಿದೆ. ಆದರೆ ಅಷ್ಟು ದೊಡ್ಡ ಸಂಖ್ಯೆಯವರನ್ನು ಕೂಡಲೇ ಅಲ್ಲಿ ಪ್ರವೇಶಗೊಳಿಸಬೇಕೆಂದರೆ ಅದು ಬಹಳ ಕಷ್ಟಸಾಧ್ಯದ ಮಾತು ಎಂದು ಅವರಾಡಿದರು.

ಪ್ಯಾಲಸ್ತೈನಿನಲ್ಲಿ ಕಾಪಾಡಿಕೊಂಡು ಬಂದಿರುವ ನ್ಯಾಯಶಾಸನ ವಿರೋಧವಾದ ಆ ಸೇನೆಗಳ ವಿಚಾರದಲ್ಲಿ ಆ ವರದಿ ನಮೂದಿಸಿರುವುದನ್ನು ನೋಡುವಾಗ, ಆ ಗುಂಪುಗಳನ್ನು ಕಳಚಿ ಆ ಸೇನೆಗಳು ಶರಣಾಗತವಾಗದ ಎನಾ ಅಷ್ಟೊಂದು ದೊಡ್ಡ ಸಂಖ್ಯೆಯವರನ್ನು ಪ್ಯಾಲಸ್ತೈನಿನಲ್ಲಿ ಪ್ರವೇಶಗೊಳಿಸುವುದು ಅಸಾಧ್ಯವೆಂಬುದು ಸ್ಪಷ್ಟ ಎಂದರು ಬ್ರಿಟಿಶ್ ಪ್ರಧಾನರು.

ವರದಿಯು ಸೂಚಿಸುತ್ತಿರುವ ವೇರೆಗೆ ನ್ಯಾಯಶಾಸನ ವಿರೋಧವಾದ ಆ ಸೇನೆಗಳು ಜಗತ್ತಿನ ಶಾಂತಿಗೇ ಅಪಾಯಕರವಾಗಿದೆ; ಆದ್ದರಿಂದ ಅವು ಅಸ್ತಿತ್ವದಲ್ಲೇ ಇರಬಾರದಾಗಿದೆ. ಹಾಗೆ ಪ್ಯಾಲಸ್ತೈನಿನಲ್ಲಿರುವ ಅರಬರೂ ಯೆಹೂದಿಗಳೂ ಇಬ್ಬರೂ ಕೂಡಲೇ ಆಯುಧಗಳನ್ನು ತ್ಯಜಿಸಬೇಕು ಎನ್ನುವ ಅವರು ಇನ್ನೂ ಹೀಗಾಡಿದರು:—

ಆಯುಧಗಳನ್ನು ಕೈಬಿಡುವಂತೆ ಮಾಡುವಲ್ಲಿ ಯೆಹೂದಿ ಏಜನ್ಸಿಯು ತಕ್ಕಂತೆ ಸಹಕರಿಸಿಲ್ಲವೆಂದೂ, ಇನ್ನಾದರೂ ಆ ಕಾರ್ಯಸಾಧನೆ ಮಾಡುವಂತೆ ಆ ಏಜನ್ಸಿ ಸಹಕರಿಸಬೇಕೆಂದೂ ಕಮಿಟಿ ಸೂಚಿಸಿದೆ ಈ ಎಲ್ಲ ಚಟುವಟಿಕೆಗಳನ್ನು ಮುಂದೊತ್ತುವಲ್ಲಿ ಆ ಏಜನ್ಸಿಯುಕ್ತ ಕಾರ್ಯಕ್ರಮವನ್ನು ಅನುಸರಿಸಬೇಕೆಂದು ಬ್ರಿಟಿಶ್ ಸರಕಾರವೂ ಅಭಿಪ್ರಾಯಪಡುತ್ತಿದೆ. ಅರಬ್ ಮತ್ತು ಯೆಹೂದೀ ಮುಂದಾಳುಗಳು ಈ ವಿಷಯದಲ್ಲಿ ತಾಳ್ಮೆ ವಹಿಸಿ ವಿವೇಚನೆಯಿಂದ ವರ್ತಿಸಬೇಕಾದುದು ಅಗತ್ಯವೆಂದು ಹೇಳದಿರಲಾಗದು.

ಅಮೆರಿಕದವರ ಅಭಿಪ್ರಾಯವೇನು?

ಕಮಿಶನಿನವರ ಸೂಚನೆಗಳನ್ನು ಜಾರಿಗೆ ತರುವಲ್ಲಿ, ಆ ಎಲಿಟರಿ ಮತ್ತು ಹಣ ಕಾಸಿನ ಹೊಣೆಗಾರಿಕೆಯನ್ನು ಹೊರುವ ಕುರಿತು ಅಮೆರಿಕದಲ್ಲಿ ಪ್ರಬಲವಾದ ಇದಿರಾಟವಿರಬಹುದೆಂದು ರೂಟರರ ವಾರ್ತೆ ಹೇಳುತ್ತಿದೆ.

ಅರಬರೀ ಶಿಫಾರಸುಗಳನ್ನು ಒಪ್ಪುವುದಿಲ್ಲ

ಈ ಬ್ರಿಟಿಶ್ ಅಮೆರಿಕ ಕಮಿಶನಿನವರ ವರದಿಯ ವಿಚಾರ ಕೇಳಿ ಅರಬರು ಪ್ಯಾಲಸ್ತೈನಿನ ಅದ್ಯಂತದಲ್ಲಿಯೂ ಇಷ್ಟರಲ್ಲೇ ಮುಷ್ಕರ ಹೂಡುವ ಯೋಜನೆಯಲ್ಲಿದ್ದಾರೆ. ಅವರು ಇತರ ಅರಬೀ ದೇಶಗಳವರನ್ನೂ ಕೆಲಸ ನಿಲ್ಲಿಸುವಂತೆ ಕೇಳಿಕೊಂಡಿದ್ದಾರೆ. ಈ ಸಂಬಂಧ ಪ್ಯಾಲಸ್ತೈನ್ ಕಮಿಟಿಯವರು ೧೦೦ ಅರಬೀ ಸಂಸ್ಥಾನಗಳಿಗೂ ಅರಬೀ ಪಾರ್ಟಿ ಮುಂದಾಳುಗಳಿಗೂ ತಂತಿ ಬಿಟ್ಟಿದ್ದಾರೆ.

ಈ ವರದಿಯ ಶಿಫಾರಸುಗಳು ಯೆಹೂದಿಗಳ ಸಮಸ್ಯೆಯನ್ನೂ ನಿವೃತ್ತಿಪಡಿಸುವುದಿಲ್ಲ; ಅರಬರ ಮೈತ್ರಿಯನ್ನೂ ಗಳಿಸುವಂಥದಲ್ಲವಾಗಿ ಈ ಕಾರ್ಯ ಪ್ರವೃತ್ತಿಗೆ ಬ್ರಿಟಿಶ್ ಸರಕಾರದವರು ಮನಸ್ಸು ಮಾಡಬಾರದೆಂದು ಕೈರೊವಿನ ಅರಬ ಮುಸ್ಲಿಮರ ಅಭಿಪ್ರಾಯ.

ಡಂಭಾಚಾರದ ವರದಿ

ಮುಸ್ಲಿಂ ಸಹೋದರರ ಸಾಯಕದಾದ ಶೇಕ್ ಹಸನ್ ಬನ್ನಾ ಅವರು ಈ ವರದಿಯದು ಬೂಟಾಟಿಕೆಯದು, ಆಷಾಢಭೂತಿಗಳದು ಎಂದೇ ಸಾರಿದ್ದಾರೆ. "ಈ ಯೆಹೂದಿಗಳಿಗೆ ಆಶ್ರಯ ಕೊಡಲು ಬೇರೆ ಯಾವ ದೇಶವೂ ಸಿದ್ಧವಿಲ್ಲವೆಂದು ಈ ಸಮಿತಿಯವರೇ ಒಪ್ಪುವರಾದರೂ ಆ ಯೆಹೂದಿಗಳ ಇಡಿಯ ಸಮಸ್ಯೆಯನ್ನು ಅರಬರ ತಲೆಗೇ ಹೇರುವಲ್ಲಿ ಮಾತ್ರ ಈ ಸಮಿತಿಯವರೊಂದಿಷ್ಟೂ ಹಿಂಜರಿದಿಲ್ಲ. ಇದು ಪಾಶ್ಚಾತ್ಯ ರಾಷ್ಟ್ರಗಳು ಯೆಹೂದ್ಯರ ಕಡೆಗೆ ತೋರಿಸಿರುವ ಕೆಟ್ಟ ಮನೋವೃತ್ತಿಯ ಪೈಶಾಚಿಕ ಹಾವಭಾವವಾಗಿದೆ. ಈ ಯೆಹೂದಿಗಳಿಗೆ ಯುರೋಪಿನಲ್ಲಿ ಆಶ್ರಯ ಸ್ಥಾನಗಳನ್ನು ದೊರಕಿಸಿ ಕೊಡದೆ, ಅವರನ್ನು ಸುಮ್ಮನೆ ಪ್ಯಾಲಸ್ತೈನಿಗೆ ಅವರ ಅಂತ್ಯವನ್ನು ಅಲ್ಲಿಯೆ ಪಡೆಯುವ ಹಾಗೆ, ಕಳುಹಿಸುವ ಏರ್ಪಾಡು ಮಾಡಿದ್ದಾರೆ. ಅಂದರೆ ಕೆಲವು ಎಲ್ಯ ಯೆಹೂದಿಗಳನ್ನು ೭೦,೦೦,೦೦೦ ಮಂದಿ ಅರಬಿ ಸಿಂಹಗಳ ಬಾಯಿಗೇ ನೂಕುತ್ತಿದ್ದಾರೆ. ಇದರಿಂದ ಅರಬರ ದ್ವೇಷಾಗ್ನಿಯ ಉರಿ ಹೆಚ್ಚುವುದು." ಎಂದು ಅವರು ಅನ್ನುತ್ತ "ಈ ಯೆಹೂದಿಗಳನ್ನು, ಯುರೋಪಿನಲ್ಲಿಯೂ ಜಗತ್ತಿನ ಇತರ ಕಡೆಗಳಲ್ಲಿಯೂ ತಿರುಗಿ ಹಂಚಿ ಹಾಕಿರಿ. ನಿಮ್ಮ ವರದಿಯ ಶಿಫಾರಸುಗಳನ್ನು ಯಾವ ಅರಬೀ ಜನಾಂಗವೂ ಸ್ವೀಕರಿಸಲಾರದು. ಈ ಶಿಫಾರಸುಗಳಿಂದ ಅರಬೀ ಜನಾಂಗಗಳ ಶಾಂತಿಗೆ ಭಂಗ ಬರುವುದು. ಈಗ ಪ್ಯಾಲಸ್ತೈನಿನಲ್ಲಿ ಯಾವ ಜನ ಮತಧರ್ಮಗಳನ್ನೂ ರಕ್ಷಿಸತಕ್ಕ ಪ್ರಜಾಸತ್ತಾತ್ಮಕವಾದ ಒಂದು ಅರಬೀ ಸರಕಾರದ ಸ್ಥಾಪನೆಯಾಗಬೇಕು" ಎಂದೂ ಹೇಳಿದ್ದಾರೆ.

"ಅರಸನಿಂದ ಹಿಡಿದು ಗುಡಾರವಾಸಿಯವರೆಗಿನ ಪ್ರತಿಯೊಬ್ಬ ಅರಬನೂ ಅರಬ್ ಪ್ಯಾಲಸ್ತೈನನ್ನು ರಕ್ಷಿಸಲು ಸಿದ್ಧರಾಗುಂದಾಗಲೇ ಬೇಕು"–ಎಂದು ಅರಬೀ ಪ್ರಾಮುಖ್ಯ ದೈನಿಕ ಪತ್ರಿಕೆಯೊಂದು ಸಾರುತ್ತಿದೆ.

ಮಿ. ಜಿನ್ನರ ಹೇಳಿಕೆ

ಮಿ. ಜಿನ್ನರು ಈ ವರದಿಯ ಕುರಿತೊಂದು ಹೇಳಿಕೆ ಕೊಡುತ್ತ "ಈ ವರದಿಯ

USE
OUR GENUINE
EUCALYPTUS OIL
FOR ALL
ACHES & PAINS

FOR HEALTH USE
SILVER KING CASTOR OIL
LAKSHMI OIL MILLS, COIMBATORE.

ಲಿಟ್ಲ್ಸ್
ಒರಿಯಂಟಲ್ ಬಾಮ್
ಯಾವತ್ತು ನೋವು ಮತ್ತು ಬೇನೆಗಳಿಗೆ
— ಭಾರತದ ಪರಮೌಷಧ. —

ತಲೆನೋವು
ಹರಿವಾತ
ಬೆನ್ನುನೋವು
ಗಂಟುನೋವು
ವಾತ
ಮಾಂಸಖಂಡದ ನೋವು
ಇವು ಉಪಶಮನವಾಗುತ್ತವೆ.

"ಲೇಪಿಸಿದ ಮಾತ್ರಕ್ಕೇ ಪರಿಹಾರ."



ಸದಾ ಸುಖಕರವಾದದ್ದು

ಹಮಾಮ್ ಸಾಬೂನನ್ನು ಉಪಯೋಗಿಸಿ ದಿನವೂ ಮಾಡುವ ಸ್ನಾನದ ಹರ್ಷವೂ ವಿಶ್ರಾಂತಿಯೂ ನಿಮಗೆ ರುಚಿಸುತ್ತದೆ. ಎಲ್ಲೆಲ್ಲಿಯೂ ಸಿಗುತ್ತದೆ. ನಿಮ್ಮ ಅಂಗಡಿಯವನನ್ನು ಹಮಾಮ್ ಕೇಳಿ.

ಹಮಾಮ್—ಎಲ್ಲರಿಗೂ ಬೇಕಾಗುವ ದೊಡ್ಡ ಸಾಬೂನು

ದಿ ತಾತಾ ಆಯಿಲ್ ಮಿಲ್ಸ್ ಕಂಪೆನಿ, ಲಿಮಿಟೆಡ್.

ಶಿಫಾರಸುಗಳನ್ನು ಓದುವಾಗ ಇದು ಅರಬರಿಗೆ ಕೊಟ್ಟ ವಾಗ್ದಾನವನ್ನು ಸಂಪೂರ್ಣವಾಗಿ ಮುರಿದು ಹಾಕಿತೆಂದೇ ತಿಳಿಯಬೇಕಾಗಿದೆ. ಈ ಶಿಫಾರಸುಗಳು ನನ್ನನ್ನು ನಡುಗಿಸಿಬಿಟ್ಟವೆ. ಈ ಶಿಫಾರಸುಗಳನ್ನು ಜಾರಿಗೆ ತರುವುದಾದರೆ ಆಗ ಅರಬರೂ ಮುಸ್ಲಿಮರೂ ಸುಮ್ಮನಿರುವವರಲ್ಲ ಎಂಬುದು ಖಂಡಿತ" ಎಂದಿದ್ದಾರೆ.

——

ಗೋಧಿಯ ಸರಬರಾಯಿಯಲ್ಲಿ ಕತ್ತರಿ ಪ್ರಯೋಗ?

ಭಾರತೀಯ ಅಧಿಕಾರಿಗಳ ಪ್ರಬಲ ಆಕ್ಷೇಪ

ಇದೇ ಮೇ ತಿಂಗಳಲ್ಲಿ ಅನ್ನಾಭಾವವಿರುವ ದೇಶಗಳ ಆವಶ್ಯಕತೆಯ ಬಗ್ಗೆ ಲಲಕ್ಷ ಟನ್ ದವಸಧಾನ್ಯಗಳು ದೊರೆಯಬಹುದೆಂದು ಅಮೆರಿಕದ ಅಧಿಕಾರಿಗಳು ಅಂದಾಜು ಮಾಡಿರುತ್ತಾರಾಗಿಯೂ ಆದರೆ ಅದರಲ್ಲಿ ಇಂಡಿಯಕ್ಕೆ ಒಂದು ಪೌಂಡಷ್ಟಾದರೂ ಕೊಟ್ಟಿಲ್ಲವಾಗಿಯೂ ಅಧಿಕಾರಯುತವಾದ ಒಂದು ವಾರ್ತೆ ಸಾರುತ್ತದೆ.

ಇದೇ ವಾರ್ತೆಯ ಮೇರೆಗೆ, ಮೇ ತಿಂಗಳಿಗಾಗಿ ಜಪಾನಿಗೆ ೧೫೨,೦೦೦ ಟನ್ ಅಮೆರಿಕದ ಧಾನ್ಯಗಳನ್ನು ಕಳುಹಿಸಬೇಕೆಂದು ನಿರ್ಧಾರವಾಗಿದ್ದರೂ, ಈಗ ಆ ವಿಚಾರದಲ್ಲಿ ಪುನರ್ವಿಮರ್ಶೆ ನಡೆಯುತ್ತಿದೆ ಎಂದೂ, ಸಂಯುಕ್ತ ಆಹಾರ ಸಮಿತಿಯವರು ಮೇ ತಿಂಗಳ ಗೋಧಿ ಕೋಟಾವಾದ ೫ ಲಕ್ಷ ಟನ್ನಿನಲ್ಲಿ ಆದಷ್ಟು ಕತ್ತರಿಸಿ ಕಡಿಮೆ ಮಾಡಲು ನೋಡುತ್ತಿರುವರಾಗಿಯೂ ಈ ವಿಷಯದಲ್ಲಿ ಹಿಂದೀ ಅಧಿಕಾರಿಗಳು ಪ್ರಬಲವಾಗಿ ಆಕ್ಷೇಪಿಸಿರುವರಾಗಿಯೂ ವಾಷಿಂಗ್‌ಟನ್ ಕಡೆಯ ವಾರ್ತೆ.

ಹಿಂದುಸ್ಥಾನಕ್ಕೆ ಮೇ ತಿಂಗಳಲ್ಲಿ ೫ ಲಕ್ಷ ಟನ್ ಗೋಧಿ ಸರಬರಾಯಿಯಾಗದಿದ್ದರೆ, ಜೂನಿನಲ್ಲಿ ಭಾರತದ ರೇಶನಿಂಗ್ ಪದ್ಧತಿಯಲ್ಲಿ ದೊಡ್ಡ ಬಿರುಕು ಉಂಟಾಗಬಹುದು ಎಂದು ಸಂಯುಕ್ತ ಆಹಾರ ಸಮಿತಿಯ ಹಿಂದೀ ಪ್ರತಿನಿಧಿ ಡಾ. ಎ. ಕೆ. ಆರ್. ಎ. ರಾವ್ ಅವರು ತಿಳಿಸಿದ್ದಾರೆ. ಅಲ್ಲದೆ ಅವರು ಹಿಂದುಸ್ಥಾನಕ್ಕೆ ಯಾವ ರೀತಿಯಲ್ಲಿಯೂ "ಕತ್ತರಿ ಪ್ರಯೋಗ" ದಿಂದ ಆಹಾರ ಧಾನ್ಯಗಳನ್ನು ಕಡಿಮೆ ಮಾಡಕೂಡದೆಂದೂ ಆ ಬೋರ್ಡಿನ ಮುಂದೆ ಪ್ರಬಲವಾಗಿ ಪ್ರತಿಭಟಿಸಿರುತ್ತಾರೆ.

ಭಾರತ ಜನಾಂಗವು ಉಪವಾಸ ಬೀಳಲಿಕ್ಕಾಗಿದೆ ಎಂಬುದನ್ನು ಡಾ. ರಾವ್ ಅವರು ಆ ಬೋರ್ಡಿಗೆ ಜೆನ್ನಾಗಿ ಶ್ರುತಪಡಿಸಿದ್ದಲ್ಲದೆ, ಮೇ ತಿಂಗಳಲ್ಲಿ ಇಂಡಿಯಕ್ಕೆ ಗೋಧಿಯನ್ನು ಹಡಗಿನಲ್ಲಿ ಕಳುಹಿಸಬೇಕಾದುದೆಷ್ಟು ಅಗತ್ಯವೆಂಬುದನ್ನೂ ಖಚಿತಪಡಿಸಿದ್ದಾರೆ.

ಕಾಂಗ್ರೆಸ್ ಗದ್ದಿಗೆಗೆ ಮೂವರು.

ಮುಂಬರುವ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಸ್ಥಾನಕ್ಕೆ ಮೂರು ಹೆಸರುಗಳು ಸೂಚಿಸಲ್ಪಟ್ಟವೆ.–ಪಂ॥ ನೆಹರೂ ಸ॥ ಪಟೇಲ್, ಆ॥ ಕೃಪಲಾನಿ. ಇವರೊಡನೆ ಶ್ರೀ. ಸುಭಾಸ್ ಚಂದ್ರಭೋಸ್ ಮತ್ತು ಶ್ರೀ. ಜಯಪ್ರಕಾಶ ನಾರಾಯಣರ ಹೆಸರುಗಳೂ ಸೂಚಿಸಲ್ಪಟ್ಟವೆ. ಆದರೆ ಶ್ರೀ. ಜಯಪ್ರಕಾಶ ನಾರಾಯಣರ ಹೆಸರು ಬಿಹಾರಿನಿಂದ ಒದಗಿಸಲಾದ ಡೆಲಿಗೇಟರ ಪಟ್ಟಿಯಲ್ಲಿ ಇಲ್ಲ; ಶ್ರೀ. ಸುಭಾಸ್ ಚಂದ್ರ ಭೋಸರು ನಾಲ್ಕಾಣೆ ಕಾಂಗ್ರೆಸ್ ಮೆಂಬರರಲ್ಲ; ಹಾಗಾಗಿ ಮೇಲ್ಕಂಡ ಮೂವರ ಹೆಸರುಗಳು ಮಾತ್ರ ಊರ್ಜಿತದಲ್ಲಿ ಇವೆ.

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ ಇದೇ ಮೇ ತಾ. ೧೯ರಲ್ಲಿ ಆಯಾ ಪ್ರಾಂತಗಳಲ್ಲೆಲ್ಲ ನಡೆಯುವುದು.

ಶ್ರೀ. ಕೃಪಲಾನಿಯವರು ಈಗ ಆ ಸ್ಥಾನಕ್ಕೆ ನಿಲ್ಲದೆ ಹಿಂತೆಗೆದಿದ್ದಾರೆ

——

ಮದ್ರಾಸ್ ಎಸೆಂಬ್ಲಿ— ಕೌನ್ಸಿಲ್ ಅಧಿವೇಶನಗಳು

ಮದ್ರಾಸ್ ಎಸೆಂಬ್ಲಿ—ಕೌನ್ಸಿಲುಗಳ ಅಧಿವೇಶನವು ಇದೇ ತಾ. ೨ನೇ ಶುಕ್ರವಾರ ಗಂಟೆ ೧೧ಕ್ಕೆ ಮದ್ರಾಸಿನಲ್ಲಿ ಜರುಗುವುದು. ಅದೇ ತಾ. ೨ಕ್ಕೆ ಮದ್ರಾಸ್ ಶಾಸನ ಸಭಾ ಕಾಂಗ್ರೆಸ್ ಪಾರ್ಟಿ ಎಂಟಂಗೂ ಇದೆ. ತಾ. ೨ರಲ್ಲಿ ಸದಸ್ಯರ ರಾಜಪ್ರಮಾಣ ನಡೆದು, ತಾ. ೨೫ರಲ್ಲಿ ಎಸೆಂಬ್ಲಿ ತನ್ನ ಸ್ಪೀಕರರನ್ನಾರಿಸುವುದು—ಅನಂತರ ಸಂಬಳದ ಮಸೂದೆ ವಿಚಾರ. ಅದೇ ತಾ. ೨೫ರಲ್ಲಿ ಕೌನ್ಸಿಲೂ ತನ್ನ ಅಧ್ಯಕ್ಷನನ್ನು ಚುನಾಯಿಸುವುದು.

ಮಂತ್ರಿಗಳ ಸಾಲಿನ ಸ್ಥಾನಗಳು ಅನುಕ್ರಮವಾಗಿ ಹೀಗಿವೆ:–ಶ್ರೀಗಳಾದ ಟಿ. ಪ್ರಕಾಶಂ, ಎ. ಎ. ಗಿರಿ, ಕೆ ಆರ್. ಕಾರಂತ, ಎಂ. ಭಕ್ತವತ್ಸಲಂ, ಕೆ. ಭಾಷ್ಯಂ, ಟಿ. ಎಸ್. ಅವಿನಾಶಲಿಂಗಂ ಚೆಟ್ಟಿಯಾರ್, ಕೆ. ಕೋಟ ರೆಡ್ಡಿ, ಡೇನಿಯಲ್ ತೋಮಸ್, ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿ, ಶ್ರೀ. ಪಿ. ಎಸ್. ಕುಮಾರಸ್ವಾಮಿ ರಾಜ ಮತ್ತು ಶ್ರೀ. ಎ. ಕೂರ್ಮಯ್ಯ. ಇವರ ಹೆಸರುಗಳ ಮುಂದೆ ಗೌರವಾರ್ಥವಾದ "ಮಾನ್ಯ" ಎಂಬುದನ್ನು ಸೇರಿಸಲಾಗುವುದು.

ಮದ್ರಾಸ್ ಎಸೆಂಬ್ಲಿ ಸ್ಪೀಕರರಿಗೂ ಕೌನ್ಸಿಲಿನ ಅಧ್ಯಕ್ಷರಿಗೂ, ಹಿಂದಿನಂತೆ ಸಹಾಯಕರಿರುವರು.

ಮದ್ರಾಸಿನಲ್ಲಿ ಎಮಿಸ್ಸರುಗಳಿಗೆ ನಿವಾಸ ಮಂದಿರಗಳನ್ನೂ ಕಾರುಗಳನ್ನೂ ಒದಗಿಸುವ ಏರ್ಪಾಡಾಗುತ್ತಿವೆ.

ಭಾರತ ರಾಷ್ಟ್ರೀಯ ಸೈನ್ಯದವರಿಲ್ಲರಿಗೆ ಬಿಡುಗಡೆ

ಜಪಾನೀಯರ ಕೈಯ ಕೈದಿಗಳಾಗಿದ್ದಾಗ, ಭಾರತ ರಾಷ್ಟ್ರೀಯ ಸೇನೆಗೆ ಸೇರಿದ್ದ ಹೆಚ್ಚುಕಡಿಮೆ ಯಾವತ್ತೂ ಎಕ್ಕುಳಿದ ಆಫೀಸರರನ್ನೂ ಸೈನಿಕರನ್ನೂ ಬಿಡುಗಡೆ ಮಾಡಲಾಗಿದೆ. ವಿಚಾರಣೆ ನಡೆಯುವುದಾಗಿದ್ದ ಕೆಲವರ ಮೇಲಿನ ಮೊಕದ್ದಮೆಗಳನ್ನು ಹಿಂತೆಗೆಯಲಾಗಿದೆ.

ಪ್ಯಾಲಸ್ತೈನಿನ ವಾರ್ತೆ.

ಪ್ಯಾಲಸ್ತೈನಿನ ವಾರ್ತೆಯ ಮೇರೆಗೆ —ಅಲ್ಲಿಯೊಂದು "ಸಿವಿಲ್ ಡಿಸ್‌ಒಬೀಡಿಯನ್ಸ್" ಚಳವಳವಾರಂಭವಾಗಲಿದೆ ಎಂದೂ; ಯೆಹೂದಿಗಳು ಆಯುಧಗಳನ್ನು ಕೈಬಿಡುವುದಿಲ್ಲವೆಂದೂ, ಇರಾಕ್ ಸರಕಾರವು ಬ್ರಿಟಿಶ್ ಮತ್ತು ಅಮೇರಿಕ ಸರಕಾರಗಳ ಬಳಿಗೆ ತಮ್ಮ ಆಕ್ಷೇಪಗಳನ್ನು ಕಳುಹಿಸಿದೆ ಎಂದೂ, ಸಿರಿಯಾ ಸರಕಾರ ಪ್ಯಾಲಸ್ತೈನ್ ಅರಬರನ್ನು ಸಮರ್ಥಿಸುತ್ತದೆಂದೂ, ಯಾವತ್ತು ಅರಬಿ ದೇಶಗಳಲ್ಲಿಯೂ ಇದೇ ಮೇ ತಾ. ೧೦ರಲ್ಲಿ ಮುಷ್ಕರ ಹೂಡುವರೆಂದೂ ತಿಳಿದು ಬರುತ್ತದೆ.

ಎಲ್ಲ ರಾಜಕೀಯ ಕೈದಿಗಳ ಬಿಡುಗಡೆ

ಮಧ್ಯಪ್ರಾಂತದ ಕಾಂಗ್ರೆಸ್ ಮಂತ್ರಿ ಮಂಡಲ, ತಾನು ಅಧಿಕಾರಕ್ಕೇರಿದ ಮೂರು ದಿನಗಳಲ್ಲೇ ಆ ಪ್ರಾಂತದ ಯಾವತ್ತು ರಾಜಕೀಯ ಬಂಧಿಗಳನ್ನೂ ಬಿಡುಗಡೆಮಾಡಿಸಿ ಕೈದಿನ ವಾರಂಟುಗಳಿದ್ದು ತಲೆ ಮರೆಸಿಕೊಂಡಿದ್ದ ಅಲ್ಲಿನ ೪೦ ಮಂದಿಯನ್ನೂ ಅಪರಾಧದಿಂದ ವಿಮೋಚನೆಗೊಳಿಸಿದೆ.

ದಿವಂಗತ ಶ್ರೀ। ಭೂಲ್ಲಾಭಾಯ್ ದೇಸಾಯಿ

ಕೆಲ ಕಾಲದಿಂದ ಅಸ್ವಸ್ಥರಾಗಿದ್ದ ಮೇಲ್ಕಂಡ ಮಹನೀಯರು ಕಳೆದ ಆದಿತ್ಯವಾರ ರಾತ್ರಿ ದಿವಂಗತರಾದರೆಂದು ತಿಳಿದು ಬಂದಿದೆ.

PREMIER LIFE & GENERAL INSURANCE Co., LTD.
Madras.

Invites applications from capable Insurance Organisers preferably those in the line with a ready organization to take up the Chief Agency for Motor car Insurance Business on most attractive terms. Best opportunity for right type of persons in view of the Motor car Insurance against third party risk being made compulsory.



"ಕ್ಷಣಿಕ ಗುಣಕೊಡುವ ಔಷಧದ ಬೆನ್ನುಹತ್ತಿ ಮರುಳಾಗ ಬೇಡಪ್ಪಾ"

ಪುರೋಹಿತ ಶ್ವಾಸಹಾರೀ ಔಷಧ ಮಾತ್ರ ಜೇರೆ. ದಮ್ಮನ್ನು ಬರೇ ದುಮುಕಿ ಇಡದೆ ಅದನ್ನು ಜೇರು ಸಹಿತ—ಕಿತ್ತು ಒಗೆಯುವದು. ಈ ಔಷಧ ಸುರುವು ಮಾಡಿದಾಗಲೇ ಕೆಮ್ಮೂ ತೇಕೂ ನಿಲ್ಲುವವು; ಹೊಟ್ಟೆ ಹಸನಾಗುವದು; ಪಚನ ಕ್ರಿಯೆಯು ತಿದ್ದುವದು; ಪುಪ್ಪುಸಗಳು ಗಟ್ಟಿಯಾಗುವವು. ಆ ಮೇಲೆ ದಮ್ಮಿರಲಿಕ್ಕೆ ಸ್ಥಳವೇ ಸಿಗುವದಿಲ್ಲ.

ದಮ್ಮು, ತೇಕು, ಬೆನ್ನುನೋವು, ಗಂಟಲು ಉರಿಯುವಂಥ ಕೆಮ್ಮು ಮುಂತಾದ ವಿಕಾರಕ್ಕೆ ಪುರೋಹಿತ—ಶ್ವಾಸಹಾರೀ ಪ್ಲೇನ (ನೀಲೀ ಪ್ಯಾಕಿಂಗ) ತೆಗೆದುಕೊಳ್ಳಬೇಕು. ಅಜೀರ್ಣ ಮತ್ತೂ ಅಮ್ಲ ಪಿತ್ತದಿಂದ ಬಳಲುವ ದಮ್ಮಿನವರು ಶ್ವಾಸಹಾರೀ ಕಾಂಪೌಂಡ (ಕೆಂಪು ಪ್ಯಾಕಿಂಗ) ತೆಗೆದುಕೊಳ್ಳಬೇಕು.

೩ ಔಂ. ೬ ಔಂ. ೧೨ ಔಂ. ಬಾಟ್ಲಿಗೆ ಕ್ರಮವಾಗಿ ರೂ. ೩—೬—೦, ರೂ. ೫—೧೨—೦, ಮತ್ತು ರೂ. ೧೦—೦—೦.

ಪುರೋಹಿತ ಫಾರ್ಮಸಿ, ಕೋಲ್ಹಾಪುರ

ಮುಂಬಯಿ ಸೋಲ ಏಜಂಟರು:
ವನಮಾಲೀ ಭಿಕಾ ಮತ್ತು ಕಂಪೆನಿ,
ಪ್ರಿನ್ಸೆಸ್ ಸ್ಟ್ರೀಟ್,
ಮುಂಬಯಿ, ೨.
ಮಂಗಳೂರು ಸ್ಟೋಕಿಸ್ಟರು:—ಮೆ॥ ಪೊಪ್ಯುಲರ್ ಸ್ಟೋರ್ಸ್.

ಪುರೋಹಿತ
ಶ್ವಾಸಹಾರೀ

WANTED

Three Organisers for the District of South Kanara on a salary ranging from Rs. 75/—to Rs. 225/— p. m. on a nominal guarantee of business. For further particulars, please apply to the SECRETARY who is now camping in Udipi.

The United Karnatak Insurance Co., Ltd., UDIPI.

Estd: 1929.

Head Office: DHARWAR.

Neo Varol fights exhaustion, fatigue, giddiness, sleeplessness & breakdown and brings you health and strength!!

DISTRIBUTORS:-
Taranath,
374, Lamington Road, Bombay 7.

P.C.I. 54/45

ಸಂಯುಕ್ತ ಜನಾಂಗ ಸಂಸ್ಥೆಯ ಕೈಲಾಗದಿದ್ದರೆ. . . !

(೨ನೇ ಪುಟದಿಂದ)

ಸರ್. ರಾಮಸ್ವಾಮಿ ಮೊದಲಿಯಾರರು ಪ್ರಾಯಶಃ, ಈ ಕೆಡುಕಿನ ತಾಯಿಬೇರಿನ ವರೆಗೂ ಹೋಗಲಾರದೆ ಇದ್ದರೂ ಇರಬಹುದು. ಅವರ ಭಾಗಕ್ಕೆ ಯಾವತ್ತು ಜ್ಞಾನದ ಅಧಿಕಾರದ ಉಗ್ರಾಣವೇ ಸಂಯುಕ್ತ ಜನಾಂಗದ ಸಂಸ್ಥೆಯಾಗಿರಲೂ ಬಹುದು ಆದರೆ ಆ ಸಂಸ್ಥೆ ಬಲಿಷ್ಠರಿಗಾಗಿ ಮಾತ್ರ; ದುರ್ಬಲರಿಗಾಗಿ ಅಲ್ಲ ಎಂಬುದು ಇನ್ನು ಮೇಲೆ ಸರ್ ಮೊದಲಿಯಾರರ ಅನುಭವಕ್ಕೆ ಬರಬೇಕಾಗಿದೆ. ಹಿಂದುಸ್ಥಾನವು ಸ್ವತಂತ್ರ ದೇಶವಲ್ಲ. ಅಂತೆ ಅದಕ್ಕೆ ಉಂಟಾಗಿರುವ ಈ ದೌರ್ಬಲ್ಯವು, ಭಾರತ ಜನಾಂಗದ ದೃಷ್ಟಿಯಿಂದ, ಇನ್ನಷ್ಟೂ ಕರುಣಾಜನಕವಾಗಿದೆ. ಈ ಸಂದರ್ಭದಲ್ಲಿ "ಸಂಯುಕ್ತ ಜನಾಂಗ ಸಂಸ್ಥೆ" ಯಾವುದಾದರೂ ಸಣ್ಣ ಪುಟ್ಟ ಕಾರಣ ಅಥವಾ ನೆವಗಳಿಂದ, ಈ ಎವಾದವನ್ನು ಕೈಗೆ ತೆಗೆದುಕೊಳ್ಳದೆ ಹೋದರೂ, ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ, ಕಾನೂನಿನ ಪ್ರತಿ ಅಕ್ಷರವೂ, ಸರ್ ರಾಮಸ್ವಾಮಿ ಮೊದಲಿಯಾರರಿಗೇ ಅನುಕೂಲವಾಗಿ ಇದೆ ಎಂಬುದನ್ನು ಇಲ್ಲಿ ಒಪ್ಪದಿರಲಾಗದು. ಆ "ಸಂಯುಕ್ತ ಜನಾಂಗ ಸಂಸ್ಥೆ"ಯ ಒಂದು ಉದ್ದೇಶವು ಹೀಗೆಂದು ವರ್ಣಿಸಲ್ಪಟ್ಟಿದೆ:—

"ಯುದ್ಧದ ಕೆಲವು ಕಾರಣಗಳನ್ನು "ಆರ್ಥಿಕ ಮತ್ತು ಸಾಮಾಜಿಕ ಕೌನ್ಸಿಲ್"ನ (ಇಕ್ನೊಮಿಕ್ ಮತ್ತು ಸೋಶಿಯಲ್ ಕೌನ್ಸಿಲ್) ಮೂಲಕ ಹೊರ ದೂಡಬೇಕು. ಆರ್ಥಿಕವಾದ, ಸಾಮಾಜಿಕವಾದ, ಸಾಂಸ್ಕೃತಿಕವಾದ, ಜನಾನುರಾಗ ಪಾತ್ರವಾದ ಶೀಲಕ್ಕೆ ಸಂಬಂಧಿಸುವ ಅಂತರ್ ಜನಾಂಗಿಕ ಸಮಸ್ಯೆಗಳನ್ನು ಪರಿಹರಿಸಿ, ಮಾನವ ವರ್ಗದ ಹಕ್ಕು ಮತ್ತು ಮೂಲಭೂತವಾದ ಸ್ವಾತಂತ್ರ್ಯಗಳ ಕಡೆಗೆ ಗೌರವವನ್ನು ಹೆಚ್ಚಿಸುವಲ್ಲಿ ಆ ಕೌನ್ಸಿಲು ಅಂತರ ಜನಾಂಗಗಳ ಸಹಕಾರವನ್ನು ಸಂಪಾದಿಸಬೇಕು"

ಉದ್ದೇಶೆಯ ಮುನ್ನುಡಿಯಲ್ಲಿ ಯುದ್ಧಾರಿಷ್ಟವು ತಪ್ಪಬೇಕಾದರೆ, "ಮಾನವ ವರ್ಗದ ಮೂಲಭೂತ ಹಕ್ಕು"ಗಳೂ, "ಮಾನವನ ಘನತೆ ಮತ್ತು ಯೋಗ್ಯತೆ"ಗಳೂ "ಸ್ತ್ರೀ ಪುರುಷರ ಮತ್ತು ದೊಡ್ಡ ಸಣ್ಣ ಜನಾಂಗಗಳ ಸಮಾನ ಹಕ್ಕು"ಗಳೂ ಸರ್ವಪ್ರಕಾರದಿಂದಲೂ ರಕ್ಷಿಸಲ್ಪಡಬೇಕೆಂದಿದೆ. ಹೀಗೆ ಆ ಉದ್ದೇಶೆಯಲ್ಲಿ ಧೃಡಪಡಿಸಲಾದ ಆ ಹಕ್ಕುಗಳನ್ನು, ಆ ದಕ್ಷಿಣ ಆಫ್ರಿಕದ ಮಸೂದೆ ಸಂಪೂರ್ಣವಾಗಿಯೂ ಅಲ್ಲಗಳೆದಿದೆ ಎಂದು ಪ್ರತ್ಯೇಕ ಹೇಳಬೇಕಿಲ್ಲ. ಆದ್ದರಿಂದ ಆ ಆರ್ಥಿಕ ಮತ್ತು ಸಾಮಾಜಿಕ ಕೌನ್ಸಿಲು, ಈ ಪ್ರಶ್ನೆಯನ್ನು, ಇಂಡಿಯಾ ಮತ್ತು ದಕ್ಷಿಣ ಆಫ್ರಿಕದೊಳಗಿನ ಎವಾದವೆಂದೇ ತಿಳಿದು ವ್ಯವಹರಿಸಬೇಕಾಗಿದೆ. ಈ "ಆರ್ಥಿಕ ಮತ್ತು ಸಾಮಾಜಿಕ ಕೌನ್ಸಿಲಿ"ನ ವರದಿಯ ಆಧಾರದ ಮೇಲೆ, ಸೆಕ್ಯುರಿಟಿ ಕೌನ್ಸಿಲ್ ಆಗಲಿ, ಜನರಲ್ ಎಸೆಂಬ್ಲಿಯಾಗಲಿ "ಅಂತರ ಜನಾಂಗಗಳಲ್ಲಿನ ಶಾಂತಿಯನ್ನೂ ಭದ್ರತೆಯನ್ನೂ ಕಾಪಾಡಲು" ಆಗತ್ಯ ಬಿದ್ದರೆ,—ಬಲಪ್ರಯೋಗವನ್ನೂ ಮಾಡಲೇ ಬೇಕು. ಅಷ್ಟಕ್ಕೆ ಯಾರು ಸಿದ್ಧರು? ಕೌನ್ಸಿಲ್ ಆಗಲಿ, ಎಸೆಂಬ್ಲಿ ಆಗಲಿ ಸಿದ್ಧವೆ?

ಇದು ಬರೇ ಇಂಡಿಯಾ ಮತ್ತು—ಪ್ರಜಾಪ್ರಭುತ್ವದ ಸರಕಾರವೆಷ್ಟು ಮಾತ್ರಕ್ಕೂ ಇಲ್ಲದ—ದಕ್ಷಿಣ ಆಫ್ರಿಕದ ಸರಕಾರಗಳೊಳಗಿನ ಒಂದು ಏವಾದದ ಸಂಗತಿಯೇ ಅಲ್ಲ; ಅದು ಬಹಳ ವಿಶಾಲವಾದದ್ದಾಗಿದೆ; ಅದು ಬಿಳಿಯವರ ಮತ್ತು ಬಿಳಿಯವರಲ್ಲದವರೊಳಗಿನ ವರ್ಣಸಂಬಂಧದ ಒಂದು ಏವಾದದ ಸಂಗತಿಯಾಗಿದೆ "ಸಂಯುಕ್ತ ಜನಾಂಗ ಸಂಸ್ಥೆ" (ಯು. ಎನ್. ಒ.) ಈ ಏವಾದವನ್ನು ಇತ್ಯರ್ಥಿಸುವಲ್ಲಿ ಕೃತಕೃತ್ಯವಾಗದಿದ್ದರೆ, ಜಗತ್ತಿನ ಮುಂದಿನ ಘೋರ ಯುದ್ಧವು, ಜಗತ್ತಿನ ಬಿಳಿ ಮತ್ತು ಬಿಳಿಯವರಲ್ಲದವರಲ್ಲಿ, ವರ್ಣ ಭೇದದ ತಳಹದಿಯ ಮೇಲೇ ನಡೆದು ಹೋಗಲಿದೆ. ಹಲವಾರು ಉದ್ದೋಷೆಗಳ ಕರ್ತೃಗಳು ಮುಂದಿನ ಯುದ್ಧದ ಶಕ್ಯತೆಯನ್ನು ಆಗಲೇ ಸಂಪೂರ್ಣ ಮನಗಂಡವರಾಗಿದ್ದರು. ಪೆಸಿಫಿಕ್ ಉದ್ದೋಷೆಯಲ್ಲಿ ಹೀಗಿದೆ:—

"ಇತರ ಕುಲ ಅಥವಾ ಜನಗಳನ್ನಾಳಲು ಇಲ್ಲವೆ ಅವರ ರಕ್ಷಕರಂತೆ ವರ್ತಿಸಲು ತಮಗೆ ಪಿತ್ರಾರ್ಜಿತವಾಗಿ ಶ್ರೇಷ್ಠವಾದ ಗುಣಗಳು ಬಂದಿವೆ ಎಂದೇ ಹಕ್ಕು ಸ್ಥಾಪಿಸುವಂಥ ಆ "ಯಜಮಾನ ಕುಲ"ಗಳ ಆ ತತ್ವಗಳನ್ನೊಂದನ್ನೂ ಸಂಯುಕ್ತ ಜನಾಂಗಗಳು ಒಪ್ಪದೆ ಕಡಾ ಕಂಡಿತವಾಗಿ ಅವನ್ನು ತಿರಸ್ಕರಿಸಿವೆ. ಸಂಯುಕ್ತ ಜನಾಂಗಗಳು, ಎಲ್ಲ ಜನಾಂಗಗಳಿಗೂ ಮೂಲಭೂತವಾದ ಸಮಾನತೆಯನ್ನೇ ಸಾರುತ್ತಿವೆ. ಅಲ್ಲದೆ, ಆ ಸಮಾನತೆಯ ಪ್ರಯೋಜನಗಳನ್ನೇ ಎಲ್ಲ ಜನಾಂಗಗಳೂ ಆನಂದದಿಂದ ಅನುಭವಿಸಲು ಶಕ್ತವಾಗುವ ಹಾಗೆ, ಸಂಯುಕ್ತ ಜನಾಂಗಗಳು ತಾವು ಪ್ರಯತ್ನಿಸುವುದಾಗಿಯೂ ಪ್ರತಿಜ್ಞೆ ಮಾಡುತ್ತಿವೆ."

ಎಫ್- ಎಂ. ಸ್ಮಟ್ಸರೂ, ಶಾಸನ ಸಭೆಯ ಅವರ ಗೆಳೆಯರೂ ಆ ಶಬ್ದಗಳಲ್ಲಿ ಅವರ ಭವಿಷ್ಯದ ಗತಿಯಡಗಿರುವುದನ್ನು ಓದಿ ನೋಡಲಿ! ಅವೇನು ಬರೇ ಶಬ್ದಗಳೆ? ಯುದ್ಧ ಮುಗಿದ ಮೇಲೆ, ಪ್ರಥಮ ಬಾರಿಯಾಗಿ ಎಫ್. ಎಂ. ಸ್ಮಟ್ಸರೂ, ಅವರ ಗುಣದವರೂ—ಪ್ರತಿಭಟನೆ ಇದ್ದರೂ, ಎಷ್ಟರಿಕೆ ಹೇಳಿದರೂ—ವರ್ಣಸಂಬಂಧದ ಒಂದು ಯುದ್ಧವನ್ನೇ, ಉದ್ದೇಶಪೂರ್ವಕವಾಗಿ ಹೂಡಿದ್ದಾರೆ. ಈ ಅಪವಿತ್ರ ಅಧರ್ಮ ಯುದ್ಧಕ್ಕೆ ತಲೆಕೆಳಗಾಗಿ ಹಾರಿದ್ದಾರೆ. ಹಿಂದೆ ಮುಂದೆ ನೋಡದೆ ನುಗ್ಗಿದ್ದಾರೆ. ಸಂಯುಕ್ತ ಜನಾಂಗ ಸಂಸ್ಥೆ ಈ ಯುದ್ಧವನ್ನು ನಿಲ್ಲಿಸದಿದ್ದರೆ, ಅದೇ ಇದರ ಅಂತ್ಯವಾಗುವುದು. ತನ್ನ ರಾಷ್ಟ್ರೀಯತ್ವಕ್ಕೆ ಉದ್ದೇಶಪೂರ್ವಕವಾಗಿ ಆಗುತ್ತಿರುವ ಈ ಪ್ರತ್ಯಕ್ಷ ಅಪಮಾನವನ್ನು ಕಂಡೂ ಭಾರತವು ಸುಮ್ಮನೆ ಸಹಿಸಿಕೊಂಡಿರುವುದೆಂದು ಎಫ್. ಎಂ. ಸ್ಮಟ್ಸರ ಸರಕಾರವಾಗಲಿ, ಸಂಯುಕ್ತ ಜನಾಂಗ ಸಂಸ್ಥೆಯಾಗಲಿ ನಂಬಿ ಎಂದಿಗೂ ಮೋಸಹೋಗದಿರಲಿ! ಸ್ವತಂತ್ರ ಭಾರತದ ಪ್ರಥಮ ಕಾರ್ಯವು ದಕ್ಷಿಣ ಆಫ್ರಿಕದ ಸರಕಾರವನ್ನು ಹಿಡಿದು ದಂಡಿಸುವುದಾಗಿದೆ-ಅದು ಅಸ್ತವಾಗಲಿರುವ ಈಗಿನ ಇಂಡಿಯಾ ಸರಕಾರದ ರೀತಿಯಲ್ಲಲ್ಲ; ಅತ್ಯ ಗೌರವವುಳ್ಳ ಜನಾಂಗದ ರೀತಿಯಲ್ಲಿಯೇ! ಭಾರತದ ಈ ಪ್ರಯತ್ನದಲ್ಲಿ ಆಸ್ಯ ಮತ್ತು ಆಫ್ರಿಕದ ಎಲ್ಲ ಬಣ್ಣದ ಜನಗಳೂ ನೆರವಾಗುವರೆಂಬುದರಲ್ಲಿ ಸಂದೇಹ ಎಲ್ಲ.

ಶ್ರೀ. ಕೆ. ಆರ್. ಕಾರಂತರು

(ಶ್ರೀ. ಕೆ. ಕೃಷ್ಣರಾವ್, ಬಿ. ಎ. ಆವರಿಂದ)

ಮದ್ರಾಸಿನ ಕಾಂಗ್ರೆಸ್ ಪಕ್ಷದ ಮಂತ್ರಿಮಂಡಲದಲ್ಲಿ ರೆವೆನ್ಯೂ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವ ನಮ್ಮ ಜಿಲ್ಲೆಯವರಾದ ಶ್ರೀ. ಕೋಟ ರಾಮಕೃಷ್ಣ ಕಾರಂತರನ್ನು ಹೃತ್ಪೂರ್ವಕ ಅಭಿನಂದಿಸುತ್ತೇವೆ. ಶ್ರೀಯುತರು ಈಗ ಕಾಲು ಶತಮಾನಕ್ಕಿಂತಲೂ ಹೆಚ್ಚಾಗಿ ಕಾಂಗ್ರೆಸ್ ಸಂಸ್ಥೆಯಲ್ಲಿದ್ದು ಕೊಂಡು ದೇಶಸೇವೆ ಮಾಡಿದ್ದಾರೆ; ಒಂದಲ್ಲ; ಹಲವು ಬಾರಿ ಕಾರಾಗೃಹವಾಸವನ್ನು ಅನುಭವಿಸಿದ್ದಲ್ಲದೆ. ತಮ್ಮ ಆರೋಗ್ಯ, ವೃತ್ತಿ (ವಕೀಲಿ) ಸಂಪತ್ತುಗಳನ್ನೆಲ್ಲಾ ದೇಶದ ಹಿತಕ್ಕಾಗಿ ಅರ್ಪಿಸಿದ್ದಾರೆ. ಅವರು ಮಾಡಿದ ತ್ಯಾಗದ ಫಲವಾಗಿ ಕೃತಜ್ಞರಾದ ಆಧಿಪತ್ಯದ ಜನರು ಅವರನ್ನು ಈ ಉಚ್ಚ ಸ್ಥಾನಕ್ಕೇರಿಸಿದ್ದಾರೆ. ಶ್ರೀ. ಕಾರಂತರಿಂದಾಗಿ ನಮ್ಮ ಈ ಜಿಲ್ಲೆ ನೆರೆನಾಡುಗಳ ಮಧ್ಯದಲ್ಲಿ ಒಂದು ಗಣ್ಯ ಸ್ಥಾನವನ್ನು ಅಲಂಕರಿಸುವಂತಾಯಿತು. ಈ ಗೌರವದ ಸ್ಥಾನವನ್ನು ಸಂಪಾದಿಸಿ ಕೊಟ್ಟ ಬಗ್ಗೆ ಜಿಲ್ಲೆಯೇ ಅವರಿಗೆ ಕೃತಜ್ಞತೆಯನ್ನು ಅರ್ಪಿಸಬೇಕಾಗಿದೆ. ಶ್ರೀಯುತರಿಗೆ ದೀರ್ಘ ಆಯುಸ್ಸನ್ನೂ, ಆರೋಗ್ಯವನ್ನೂ ಭಗವಂತನು ಕರುಣಿಸಿ ಈ ಜಿಲ್ಲೆಯ, ಆಧಿಪತ್ಯದ ಏಕೆ ಅಖಿಲ ಭಾರತದ ಜನತೆಯ ಸೇವೆಯನ್ನು ದಕ್ಷತೆಯಿಂದ ನೆರವೇರಿಸುವಂತೆ ಮಾಡಲೆಂದು ಪ್ರಾರ್ಥಿಸುತ್ತೇವೆ.

CANARA BANK LIMITED

(ESTD. 1906.)

(Incorporated in British India-Liability of Members Limited)

SEASON DEPOSITS.

of Rs. 10,000/— and over in multiples of Rs 1000/— and maturing within 30th September 1946 are now accepted at the following rates:—

3 months	....	2¼%
4 to 5 months	....	2½%
6 to 9 months	....	2¾%

Rates for Season Deposits of less than Rs. 10,000/- with a minimum of Rs. 1000/- and in multiples of Rs 500/-may be ascertained on application to our nearest branch.

ಮಕ್ಕಳಿಗೆ

ಡೋಂಗರೆ ಬಾಲಾಮೃತವು

ಆದರ್ಶಕವಾದ ಪೌಷ್ಟಿಕ. ಇದು ಮಧುರವಾಗಿದೆ.

ದಿ ಬೊಂಬೆಲ್ಯಾಫ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್.

1908ರಲ್ಲಿ ಸ್ಥಾಪಿಸಲ್ಪಟ್ಟುದು

ಶಾಂತಿ ಮತ್ತು ಭದ್ರತೆ

ಯುರೋಪಿನ ಪೀಡಿಸಲ್ಪಟ್ಟ ಜನಾಂಗಗಳಿಗಾಗಿ ಸ್ವಾತಂತ್ರ್ಯವನ್ನು ಗಳಿಸಿ ಕೊಂಡಿದ್ದ ಆ ಪ್ರಚಂಡ ಯುದ್ಧ ಮುಗಿಯಿತು. ಆ ನಾಲ್ಕು ಸ್ವಾತಂತ್ರ್ಯ ಗಳನ್ನು ಸಂಪಾದಿಸಿ ಕೊಡಲು ಹಲವಾರು ಯತ್ನಗಳಾದರೂ ನಾವು ಅದರ ಸಮಾಪದಲ್ಲೆಲ್ಲಿಯೂ ಇದ್ದಂತೆ ತೋರುವುದಿಲ್ಲ. ನಾವು ಎಮೆಯ ಸೇವೆಯನ್ನು ಬಯಸುವವರೆಲ್ಲರಲ್ಲಿಯೂ ಆ ಸೇವಾ ಕ್ರಮವನ್ನು ಹರಡಿಸುವ ಮೂಲಕ, ಯುದ್ಧ ಕಾಲದಲ್ಲಿಯೂ ಶಾಂತಿ ಸಮಯದಲ್ಲಿಯೂ ಈ ವೈಯಕ್ತಿಕ ವಾಸ್ತವಿಕ ಸ್ವಾತಂತ್ರ್ಯಸಿದ್ಧಿ ಕಾರ್ಯದಲ್ಲಿ ನಮ್ಮ ನಮ್ಮ ರೀತಿಯಲ್ಲಿ ಸಹಾಯ ಮಾಡುತ್ತಿದ್ದೇವೆ.

1945ರಲ್ಲಿ ಪೂರ್ಣವಾದ ವ್ಯವಹಾರ } ಕಂಪೆನಿಯದು: **2¾** ಕೋಟಿಗೂ ಮಿಕ್ಕಿ ನಮ್ಮದು: ಸುಮಾರು **50**ಲಕ್ಷ

ಕೊಚ್ಚಿಕಾರ ಸಹೋದರರು ಲಿಮಿಟೆಡ್,

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)

ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು ಬೊಂಬಯಿ ಸಿಗರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಿಗೆ ಸ್ಪೆಶಲ್ ಏಜೆಂಟರು.

"ಬೊಂಬಯಿ ಲ್ಯಾಫ್ ಬಿಲ್ಡಿಂಗ್ಸ್"

ಗಾಂಧಿ ನಗರ, ಉಡುಪಿ.

ಆಫೀಸುಗಳು ಇರುವ ನಗರಗಳು:—

ಬೊಂಬಯಿ, ಬೆಂಗಳೂರು, ಕಲ್ಲಿಕೋಟೆ, ಮಧುರೆ, ಮಂಗಳೂರು, ಮದ್ರಾಸು ಮತ್ತು ತ್ರಿವೆಂದ್ರಮ್.

ದಕ್ಷಿಣ ಭಾರತದಲ್ಲೆಲ್ಲ ಏಜೆನ್ಸಿಗಳಿವೆ.

THE UNITED KARNATAK INSURANCE CO., LTD.

H. O.: Dharwar. Estd: 1929.

Glad to announce the business increase in 1945 is

400% of that of in 1944.

We entertain young, energetic, and ambitious persons, as agents, special agents, Organisers and Inspectors under our expansion scheme.

A. S. Kini,
Managing Director.

Please apply to:
BRANCH MANAGER,
Court Road, UDIPI.
Or M/s. M. N. BHANDARY & Co.,
Kodialbail, MANGALORE.

ಪಾತ್ರ ಬಣ್ಣದ ಆಧುನಿಕ ನಮೂನೆಯ
ಶ್ರೇಷ್ಠ ತರಗತಿಯ
80 ಮತ್ತು 100 "ಕೌಂಟ್" ಸೀರೆಗಳು
ಮತ್ತು
ಕೈ ಮಗ್ಗದ ಮೈಟಿ ವ್ಯಾಲುಗಳು

ಪಡಕೊಳ್ಳುವ ಮುಂಚೆ JNC ಗುರುತನ್ನು ನೋಡಲು ಮರೆಯದಿರಿ.

ಜೆ. ನಾರಾಯಣ ಸಾಮಿ ಚೆಟ್ಟಿ ಎಂಡ್ ಕೊ.,
ರಖಂ ವ್ಯಾಪಾರಿ 18/498 ರಂಗೈ ಗೌಡರ್ ರಸ್ತೆ
ಕೊಯಂಮುತ್ತೂರು.

Machine to increase your Resources

Rs. 89 8 0 will fetch Rs. 100

Jaya Cash Certificates

For particulars apply to:—

The Bank of Mangalore Ltd.

HEAD OFFICE: CAR STREET, MANGALORE.

BRANCHES:— ○ Bunder ○ Moodabidri ○ Vittal ○ Mangalore ○ Padubidri ○ Badiadka and ○ Uppinangadi

ಶಾಸ್ತ್ರೀಯ ಅಮೂಲ್ಯ ಔಷಧಗಳ

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನಿಯುವುದು. 8 ಔನ್ಸಿನ ಬಾಟ್ಲಿಗೆ ರೂಪ್ಯ 2—4—0. ಅಂಚೆವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಆಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಸ್ಕಾಂಡು ಒಕ್ಕೆ ರೂ. 4—0—0. ಅಂಚೆವೆಚ್ಚ ಬೇರೆ.

ಕಸ್ತೂರಿ ಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ಸಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯ ಗಳಾಗಿವೆ. ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ವಗೈರೆ ಬೇರೆ.

ವಿ. ಸೂ. ಮೇಲಿನ ಕ್ರಯವು ಬಜಾರ ಧಾರಣೆಗೆ ಅನುಸರಿಸಿ ಇರುತ್ತದೆ.

ಶ್ರೀ। ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

THE
Pie-Money Bank, Ltd.,
Maidan Road, MANGALORE.

Undertakes all kinds of Banking Business. Current account at 1% per annum. Savings Bank Deposits at 4% per annum.

FIXED DEPOSITS.
For 2 years 4½% 1 year 4%
For 6 months 3½% 3 months 3%

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:—
K. R. Guru,
Managing Director.

ವೆಂಕಟಗಿರಿಮಹಾತ್ಮೆ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖುಚಿತ ವಾಗುವಂತೆ ಗೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ. ೫೯೯ ಪದ್ಯಗಳಿರುವ ೧೫ ಅಧ್ಯಾಯಗಳು ದಪ್ಪವಾದ ಕಾಗದ. ಮುದ್ದಾದ ಮುದ್ರಣ.

ಬೆಲೆ ರೂಪ್ಯ ೧-೪-೦ ಟಪ್ಪಾಲು ಹಾಸಲು ಬೇರೆ. ಸಂಸ್ಕೃತ

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

JAYA LAXMI BANK, LTD.,

HEAD OFFICE:
MANGALORE.
(ESTD. 1923.)

Our steady progress for the last 22 years inspires confidence both in the depositing and the borrowing public.

Curteous and Prompt Service.

For all further information kindly call on:

M. Narain Shanker,
MANAGER,
Head Office.

Printed & Published by M[illegible]bhu, B. A., at the Mangalore Press, Car-Street, Mangalore. Editor: Hurli Bhima Rao